# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶುಕ್ರವಾರ, ಮೇ 17, 2024

ಸಂಪುಟ : 51 ಸಂಚಿಕೆ : 03 ☎ 08192-254736 91642 99999 RNI No: 27369/75 ಪುಟ : 6 ರೂ : 5.00 www.janathavani.com janathavani@mac.com










ದಾವಣಗೆರೆ ನಗರದಲ್ಲಿ ಗುರುವಾರ ಸಂಜೆ ಗಾಳಿ ಸಹಿತ ಉತ್ತಮ ಮಳೆಯಾಯಿತು. ಕೆಲ ಗಂಟೆಗಳ ಕಾಲ ಬಿದ್ದ ಜಿಟಿ ಜಿಟಿ ಮಳೆಗೆ ತುಂಪು ವಾತಾವರಣ ನಿರ್ಮಾಣವಾಗಿತ್ತು. ಎವಿಕೆ ಕಾಲೇಜು ರಸ್ತೆಯಲ್ಲಿ ಕೊಡೆ ಆಸರೆಯಲ್ಲಿ ಮನೆಗೆ ತೆರಳತ್ತಿರುವ ವಿದ್ಯಾರ್ಥಿನಿಯರ ಚಿತ್ರವಿದು.

# ಬರ, ಕಾನೂನು ಪರಿಸ್ಥಿತಿ: ಸಿಎಂ ಸಭೆ

ಬೆಂಗಳೂರು, ಮೇ 16 - ಬರ ನಿರ್ವಹಣೆ ಹಾಗೂ ಕಾನೂನು ಪರಿಸ್ಥಿತಿ ಕುರಿತಂತೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅನೌಪಚಾರಿಕ ಸಭೆ ಕರೆದಿದ್ದಾರೆ.

ಲೋಕಸಭಾ ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ, ಮುಖ್ಯಮಂತ್ರಿ ಅವರು, ಯಾವುದೇ ಸರ್ಕಾರಿ ಮಟ್ಟದ ಸಭೆ ಕರೆಯಲಾಗದು. ಈ ಕಾರಣ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈ ಅನೌಪಚಾರಿಕ ಸಭೆ ಕರೆದಿದ್ದಾರೆ.

ಮುಂಗಾರು ಮಳೆ ತಡವಾಗಿರುವುದರಿಂದ ರಾಜ್ಯದೆಲ್ಲೆಡೆ ಕುಡಿಯುವ ನೀರು ಹಾಗೂ ಮೇವಿನ ಸಮಸ್ಯೆ ಅಗಾಧವಾಗಿ ಕಾಡಿದೆ. ಮತ್ತೊಂದೆಡೆ ಸಣ್ಣ-ಪುಟ್ಟ ಕಾರಣಗಳಿಗಾಗಿ ಹೆಣ್ಣು ಮಕ್ಕಳ ಕೊಲೆ ನಡೆಯುತ್ತಿದೆ. ಚುನಾವಣಾ ನೆಪ ಮುಂದೊಡ್ಡಿ ಅಧಿಕಾರಿಗಳು ಬಿಗಿ ಕ್ರಮ ಕೈಗೊಳ್ಳದಿರುವುದರಿಂದ ಸಮಸ್ಯೆಗಳು ದಿನೇ ದಿನೇ ಉಲ್ಬಣಗೊಳ್ಳುತ್ತಿವೆ. ಬರ ಪರಿಹಾರ ನಿರ್ವಹಣೆ ಹಾಗೂ ತುರ್ತು ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲು ಅನುಮತಿ ನೀಡುವಂತೆ ಮುಖ್ಯಮಂತ್ರಿ ಅವರು ಚುನಾವಣಾ ಆಯೋಗಕ್ಕೆ ಬರೆದ ಪತ್ರಕ್ಕೆ ಸಮ್ಮತಿ ದೊರೆತಿಲ್ಲ.

ಈ ಕಾರಣಕ್ಕಾಗಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲೇ ವಿಧಾನಸೌಧದಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಹಾಗೂ ಆಯ್ದ ಸಚಿವರ ಸಭೆಯನ್ನು ಕರೆಯಲಾಗಿದೆ.

**ಕುಡಿಯುವ ನೀರು, ಮೇವಿನ ಸಮಸ್ಯೆ, ಹೆಣ್ಣು ಮಕ್ಕಳ ಕೊಲೆ ಮೊದಲಾದ ವಿಷಯಗಳ ಬಗ್ಗೆ ಚರ್ಚಿಸಲಿರುವ ಮುಖ್ಯಮಂತ್ರಿ**

ಬರ ಹಾಗೂ ವಿದ್ಯುತ್ ಸಮಸ್ಯೆಗೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಸಲಹೆ ನೀಡುವ ಮುಖ್ಯಮಂತ್ರಿ ಅವರು, ಈ ಬಗ್ಗೆ ತಕ್ಷಣ ಕಾರ್ಯಪ್ರವೃತ್ತರಾಗುವಂತೆ ಸೂಚಿಸಲಿದ್ದಾರೆ. ಪ್ರಸಕ್ತ ಮುಂಗಾರು ಮೇ 31ರಂದು ಕೇರಳ ಪ್ರವೇಶಿಸಲಿದೆ ಎಂಬ ಮಾಹಿತಿಯನ್ನು ಹವಾಮಾನ ಇಲಾಖೆ ನೀಡಿದೆ.

ಇನ್ನು 15 ದಿನಗಳ ಕಾಲ ಮಳೆ ಬೀಳದಿದ್ದರೆ ಕುಡಿಯುವ ನೀರು ಹಾಗೂ ಮೇವಿಗೆ ಭಾರೀ ತೊಂದರೆಯಾಗುತ್ತದೆ, ಇತ್ತ ಗಮನ ಹರಿಸಿ ಎಂದು ತಿಳಿಸಲಿದ್ದಾರೆ. ಕಾನೂನು ಸುವ್ಯವಸ್ಥೆ ಬಗ್ಗೆ ಬಿಗಿ ಕ್ರಮ ಕೈಗೊಳ್ಳಿ, ಸಣ್ಣ-ಪುಟ್ಟ ಕಾರಣಗಳಿಗೆ ಕೊಲೆಗಳು ನಡೆಯುತ್ತಿವೆ. ಇದನ್ನು ಹತ್ತಿಕ್ಕಲು ಮುಂಜಾಗ್ರತಾ ಕ್ರಮ ಕೈಗೊಳ್ಳಿ ಎಂದೂ ತಿಳಿಸಲಿದ್ದಾರೆ.

ಕಳೆದ ಮುಂಗಡ ಪತ್ರದಲ್ಲಿ ಪ್ರಕಟಗೊಂಡಿರುವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಿದ್ಧತೆ ಮಾಡಿಕೊಳ್ಳಿ, ಚುನಾವಣಾ ನೀತಿ ಸಂಹಿತೆ ಮುಗಿಯುತ್ತಿದ್ದಂತೆ ಆದೇಶಗಳು ಹೊರಬಂದು ಯುದ್ಧೋಪಾದಿಯಲ್ಲಿ ಕೆಲಸ ಮಾಡಲು ಸಜ್ಜಾಗಿ ಎಂದು ಹಿರಿಯ ಅಧಿಕಾರಿಗಳಿಗೆ ತಿಳಿಸಲಿದ್ದಾರೆ.

ನಾಳಿನ ಸಭೆಗೆ ಅಧಿಕಾರಿಗಳಲ್ಲದೆ, ಕಂದಾಯ, ಕೃಷಿ, ಪೌರಾಡಳಿತ, ಗೃಹ, ನಗರಾಭಿವೃದ್ಧಿ, ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವರಲ್ಲದೆ, ಸಂಪುಟದ ಹಿರಿಯ ಸಹೋದ್ಯೋಗಿಗಳಿಗೂ ಬರುವಂತೆ ಆಹ್ವಾನಿಸಲಾಗಿದೆ.

# ಸೌರ ಮಾರುತ: ಪ್ರಭೆ ಸುಂದರ, ಪರಿಣಾಮ ಗಂಭೀರ



ನವದೆಹಲಿ, ಮೇ 16 - ಪ್ರಬಲ ಸೌರ ಮಾರುತಗಳ ಕಾರಣದಿಂದ ಅಪರೂಪದ ಸ್ಥಳಗಳಲ್ಲೂ ಧ್ರುವ ಪ್ರಭೆ ಅಥವಾ ಆರೋರಾಗಳು ಕಾಣಿಸಿಕೊಳ್ಳುತ್ತಿವೆ. ಸಾಮಾನ್ಯವಾಗಿ ಇವು ಉತ್ತರ ಇಲ್ಲವೇ ದಕ್ಷಿಣ ಧ್ರುವಗಳ ಸಮೀಪ ಕಂಡು ಬರುತ್ತವೆ.

ಆದರೆ, ತೀವ್ರ ಸೌರ ಮಾರುತಗಳ ಕಾರಣದಿಂದಾಗಿ ಆರೋರಾಗಳ ಸುಂದರ ದೃಶ್ಯಗಳು ಬೇರೆ ಸ್ಥಳಗಳಲ್ಲೂ ಕಂಡು ಬರುತ್ತಿವೆ. ಆದರೆ, ಇವೇ ಸೌರ ಮಾರುತಗಳಿಂದಾಗಿ ಉನ್ನತ ತಾಂತ್ರಿಕ ಉಪಕರಣಗಳ ಮೇಲೆ ಪರಿಣಾಮವಾಗುತ್ತಿದೆ. ವಿದ್ಯುತ್ ಗ್ರಿಡ್‌ಗಳು ಹಾಗೂ ಉಪಗ್ರಹಗಳಿಗೂ ಅಪಾಯ ಎದುರಾಗಿದೆ.

ಮೇ 8ರಂದು ಸೂರ್ಯನಲ್ಲಿ ಬೃಹತ್ ಸ್ಫೋಟ ಉಂಟಾಗಿತ್ತು. ಇದರಿಂದಾಗಿ ಎಂಟು ಶತಕೋಟಿ ಟನ್‌ಗಳ ಅಯಸ್ಕಾಂತೀಯ ಹಾಗೂ ವಿದ್ಯುತ್ ಪ್ರಭಾವ ಹೊಂದಿರುವ ಮೋಡ ಹರಡಿತ್ತು. ಇವುಗಳನ್ನು ಕೊರೊನಲ್ ಮಾಸ್ ಇಜೆಕ್ಷನ್ (ಸಿ.ಎಂ.ಇ.) ಎಂದು ಕರೆಯಲಾಗುತ್ತದೆ. ಇವುಗಳು ಭೂಮಿಯ ಕಡೆ ಧಾವಿಸಿವೆ.

ಇವು ಭೂಮಿಯ ಅಯಸ್ಕಾಂತ ವಲಯಕ್ಕೆ ಅಪ್ಪಳಿಸಿವೆ. ಸಿ.ಎಂ.ಇ.ಗಳ ಕಾರಣದಿಂದಾಗಿ ಭೂಮಿಯಲ್ಲಿ ಆರೋರಾಗಳ ದೃಶ್ಯಗಳು ಗೋಚರವಾಗುತ್ತಿವೆ. ಸಿ.ಎಂ.ಇ.ಗಳಿಂದ ಉಂಟಾಗುವ ಉಪ ಪರಮಾಣು ಕಣಗಳು ಉಪಗ್ರಹಗಳ ಸೌರ ಫಲಕಗಳು ಹಾಗೂ (4ನೇ ಪುಟಕ್ಕೆ)

# ಆನ್‌ಲೈನ್‌ನಲ್ಲಿ ಮಕ್ಕಳನ್ನು ರಕ್ಷಿಸುವಲ್ಲಿ ಫೇಸ್‌ಬುಕ್, ಇನ್‌ಸ್ಟಾಗ್ರಾಂ ವಿಫಲ


ಡನ್, ಮೇ 16 – ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂಗಳು ಆನ್‌ಲೈನ್‌ನಲ್ಲಿ ಮಕ್ಕಳನ್ನು ರಕ್ಷಿಸಲು ವಿಫಲವಾಗಿವೆ ಎಂಬ ಆರೋಪಗಳ ಬಗ್ಗೆ ಯುರೋಪ್ ಒಕ್ಕೂಟ ಹೊಸ ತನಿಖೆ ಆರಂಭಿಸಿದೆ.

27 ದೇಶಗಳ ಯುರೋಪ್ ಒಕ್ಕೂಟದ ಡಿಜಿಟಲ್ ಸೇವಾ ಕಾಯ್ದೆಯನ್ನು ಕಳೆದ ವರ್ಷ ಜಾರಿಗೆ ತರಲಾಗಿತ್ತು. ಆನ್‌ಲೈನ್ ವೇದಿಕೆಗಳನ್ನು ಸ್ವಚ್ಛಗೊಳಿಸಲು ಹಾಗೂ ಇಂಟರ್‌ನೆಟ್ ಬಳಕೆದಾರರನ್ನು ರಕ್ಷಿಸಲು ಈ ಕಾಯ್ದೆ ಜಾರಿಗೆ ತರಲಾಗಿತ್ತು. ಯುರೋಪ್ ಒಕ್ಕೂಟದ ಕಠಿಣ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಲಾಗುತ್ತಿದೆ. (2ನೇ ಪುಟಕ್ಕೆ)

# ಕೊವ್ಯಾಕ್ಸಿನ್ ಲಸಿಕೆ ಪಡೆದ ಮೂರನೇ ಒಂದರಷ್ಟು ಜನರಲ್ಲಿ ಅಡ್ಡ ಪರಿಣಾಮ !

ನವದೆಹಲಿ, ಮೇ 16 – ಭಾರತ್ ಬಯೋಟೆಕ್‌ನ ಕೊರೊನಾ ಲಸಿಕೆ ಪಡೆದ ಮೂರನೇ ಒಂದರಷ್ಟು ಜನರಲ್ಲಿ ಅಡ್ಡ ಪರಿಣಾಮ ಕಾಣಿಸಿಕೊಂಡಿವೆ ಎಂದು ಬಿ.ಹೆಚ್.ಯು. ತಂಡದ ಅಧ್ಯಯನವೊಂದು ತಿಳಿಸಿದೆ.

926 ಜನರ ಜೊತೆ ದೂರವಾಣಿಯಲ್ಲಿ ಮಾತನಾಡಿದ ನಂತರ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಸಂಶೋಧಕರು ಈ ವರದಿ ರೂಪಿಸಿದ್ದಾರೆ. ಆದರೆ, ಈ ಬಗ್ಗೆ ಸ್ಪಷ್ಟನೆ ನೀಡಿರುವ (2ನೇ ಪುಟಕ್ಕೆ)





Benefits made just for you

| Model | Cash benefits upto* | Exchange Bonus | Govt. / Corporate Employees | Total benefits upto* |
|---|---|---|---|---|
| Grand i10 NIOS | ₹35 000 | ₹10 000 | ₹3 000 | ₹48 000 |
| i20 | ₹25 000 | ₹10 000 | - | ₹35 000 |
| AURA | ₹20 000 | ₹10 000 | ₹3 000 | ₹33 000 |
| EXTER | ₹10 000 | - | - | ₹10 000 |
| VENUE | ₹25 000 | ₹10 000 | - | ₹35 000 |
| VENUE N Line | ₹20 000 | ₹10 000 | - | ₹30 000 |
| VERNA | ₹15 000 | ₹20 000 | - | ₹35 000 |
| ALCAZAR | ₹45 000 | ₹20 000 | - | ₹65 000 |
| TUCSON | ₹50 000 | - | - | ₹50 000 |
| KONA Electric | ₹4 00 000 | - | - | ₹4 00 000 |


## ಕಚ್ಚಾ ತೈಲದ ಮೇಲಿನ ತೆರಿಗೆ ಇಳಿಕೆ

ನವದೆಹಲಿ, ಮೇ 16 - ದೇಶೀಯವಾಗಿ ಉತ್ಪಾದಿಸುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭದ ಮೇಲಿನ ತೆರಿಗೆಯನ್ನು ಕೇಂದ್ರ ಸರ್ಕಾರ ಪ್ರತಿ ಟನ್‌ಗೆ 5,700 ರೂ.ಗಳಿಗೆ ಇಳಿಸಿದೆ. ಗುರುವಾರದಿಂದ ಜಾರಿಗೆ ಬರುವಂತೆ ತೆರಿಗೆಯನ್ನು 8,400 ರೂ.ಗಳಿಂದ ಇಳಿಕೆ ಮಾಡಲಾಗಿದೆ. ಜುಲೈ 1, 2022ರಂದು ಮೊದಲ ಬಾರಿಗೆ ತೆರಿಗೆ ಹೇರಲಾಗಿತ್ತು.







# ಸಮಾಜದಲ್ಲಿ ಅನಿಷ್ಠ ಪದ್ಧತಿ ಹೋಗಲಾಡಿಸಿದ ಸಂತ ಚನ್ನವೀರಸ್ವಾಮಿ

## ಲಿಂಗನಾಯಕನಹಳ್ಳಿ ಶಾಖಾ ಮಠದ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಶ್ರೀ ಅನ್ನದಾನೇಶ್ವರ ಮಹಾಶಿವಯೋಗಿಗಳು



ಹರಪನಹಳ್ಳಿ, ಮೇ 16- ಬಸವಣ್ಣನವರ ತತ್ವ, ಸಿದ್ಧಾಂತಗಳನ್ನು ಅಳವಡಿಸಿಕೊಂಡು, ಸಮಾಜದಲ್ಲಿ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಿದ ಮಹಾನ್ ಸಂತ ಚನ್ನವೀರಸ್ವಾಮಿ ಎಂದು ಮುಂಡರಿಗಿಯ ನಾಡೋಜ ಶ್ರೀ ಅನ್ನದಾನೇಶ್ವರ ಮಹಾ ಶಿವಯೋಗಿಗಳು ಹೇಳಿದರು.

ತಾಲ್ಲೂಕಿನ ಅರಸನಾಳು ಗ್ರಾಮದ ಜಂಗಮ ಕ್ಷೇತ್ರ ಲಿಂಗನಾಯಕನಹಳ್ಳಿ ಚನ್ನವೀರಸ್ವಾಮಿ ಶಾಖಾ ಮಠದ ಜೀರ್ಣೋದ್ಧಾರ ಕಾರ್ಯಕ್ರಮ ಹಾಗೂ ಪುರಾಣ ಮಂಗಲೋತ್ಸವ, ಸಾಮೂಹಿಕ ವಿವಾಹ ಕಾರ್ಯಕ್ರಮದ ನೇತೃತ್ವ ವಹಿಸಿ ಶಿವಯೋಗಿಗಳು ಮಾತನಾಡಿದರು.

ಮನುಷ್ಯನು ಯಾವುದೇ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡು ನಿಷ್ಠೆ, ಶ್ರದ್ಧಾ ಭಕ್ತಿಯಿಂದ ನಿರ್ವಹಿಸಿದಲ್ಲಿ ಭಗವಂತನ ಕೃಪೆಗೆ ಪಾತ್ರನಾಗುತ್ತಾನೆ. ಪ್ರಗತಿಯನ್ನು ಸಾಧಿಸದ ಹೊರತು ಏನನ್ನೂ ಜಯಿಸಲಾರ ಎನ್ನುವ ತತ್ವವನ್ನು ಹೊಂದಿ ಸಮಾಜದಲ್ಲಿನ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಿ, ಸರ್ವಧರ್ಮೀಯರ ಸಮಾನತೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಶರಣ ಚನ್ನವೀರ ಸ್ವಾಮಿ ಆಗಿದ್ದಾರೆ ಎಂದರು.

ನೀಲಗುಂದದ ಗುಡ್ಡದ ವಿರಕ್ತ ಮಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮಿ ಮಾತನಾಡಿ ಮಠಗಳೆಂದರೆ ಜೀವಂತ ಮಂದಿರಗಳಿದ್ದಂತೆ, ನಾಡಿನಲ್ಲಿ ಸಾವಿರಾರು ಮಠಗಳು ಉಚಿತವಾಗಿ ಶಿಕ್ಷಣ ಮತ್ತು ಅನ್ನ ದಾಸೋಹಗಳನ್ನು ನಡೆಸುತ್ತಾ, ದೀನ ದಲಿತರ ಮಕ್ಕಳ ಬಾಳಿಗೆ ಬೆಳಕನ್ನು ನೀಡುತ್ತಾ ಬಂದಿವೆ. ಈ ಶಾಖಾ ಮಠವು ನಾಡಿನಲ್ಲಿ ಶಿಕ್ಷಣ ಅನ್ನ ದಾಸೋಹಗಳನ್ನು ನಡೆಸುತ್ತಾ ಮುಂದಿನ ದಿನಗಳಲ್ಲಿ ಉನ್ನತ ಮಟ್ಟದಲ್ಲಿ ಬೆಳೆಯಲು ಸಹಕರಿಸಿರಿ ಎಂದರು.

ಗ್ರಾಮೀಣ ಭಾಗದಲ್ಲಿ ಇಂದಿಗೂ ಜಾತಿ ಪದ್ಧತಿಗಳು ಜೀವಂತವಾಗಿವೆ, ಆ ರೀತಿಯ ಬಾಲಿಶ ಧೋರಣೆಯನ್ನು ಕಾಣದೆ, ಸಮಾಜದಲ್ಲಿ ಎಲ್ಲರೂ ಒಂದೇ ರೀತಿಯ ವಾತಾವರಣ ನಿರ್ಮಿಸಿಕೊಂಡು, ಶರಣ ಚನ್ನವೀರಸ್ವಾಮಿಯ ತತ್ವ, ಸಿದ್ಧಾಂತಗಳನ್ನು ರೂಢಿಸಿಕೊಳ್ಳಿ, ಶ್ರಮವಹಿಸಿ ದುಡಿಯಿರಿ ಎಂದರು.

ಚನ್ನವೀರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ನ್ಯಾಯವಾದಿ ಪ್ರಕಾಶ್ ಪಾಟೀಲ್ ಮಾತನಾಡಿ, ಒಂದೂವರೆ ವರ್ಷಗಳ ಸತತ ಪ್ರಯತ್ನ ಮತ್ತು ಊರಿನ ಎಲ್ಲಾ ಸಮಾಜದವರ ಸಹಕಾರದಿಂದ, 65 ಲಕ್ಷಕ್ಕೂ ಅಧಿಕ ಖರ್ಚಿನೊಂದಿಗೆ ಚನ್ನವೀರ ಸ್ವಾಮಿಗಳ ದೇವಸ್ಥಾನವು ಯಶಸ್ವಿಯಾಗಿ ನೆರವೇರಿದೆ. ಇಂತಹ ಧಾರ್ಮಿಕ ಕಾರ್ಯದಲ್ಲಿ ಅತೀ ಕಡುಬಡವನಾದ ಕೇವಲ ಅರ್ಧ ಎಕರೆ ಜಮೀನು ಹೊಂದಿರುವ ಲಕ್ಕಪ್ಪ ದೇವಸ್ಥಾನ ನಿರ್ಮಾಣಕ್ಕಾಗಿ 45 ಸಾವಿರ ರೂ.ಗಳನ್ನು ದೇಣಿಗೆ ನೀಡಿದ್ದಾರೆ ಎಂದು ಸ್ಮರಿಸಿ, ಈ ರೀತಿಯ ನಿಸ್ವಾರ್ಥ ಸೇವೆ ನೀಡಲು ಪ್ರತಿಯೊಬ್ಬರ ಮುಂದೆ ಬಂದಲ್ಲಿ ನಮ್ಮ ಗ್ರಾಮದ ಅಭಿವೃದ್ಧಿಗಾಗಿ ಯಾರ ಸಹಕಾರವಿಲ್ಲದೇ ಬೆಳೆಯಬಹುದು ಎಂದರು.

ಲಿಂಗನಾಯಕನಹಳ್ಳಿ ಡಾ. ಚನ್ನವೀರ ಶಿವಯೋಗಿಗಳು, ಅರಸಿಕೇರೆ ಶಾಂತಲಿಂಗ ದೇಶೀಕೇಂದ್ರ ಸ್ವಾಮೀಜಿ, ಹಾವನೂರು ದಳವಾಯಿ ಮಠದ ಶಿವಕುಮಾರಸ್ವಾಮಿ, ಡಿ .ಕೊಟ್ರಬಸಪ್ಪ, ಶ್ರೀಕಾಂತರೆಡ್ಡಿ, ಹೆಚ್ ರುದ್ರಪ್ಪ, ಗಿರಿರಾಜರೆಡ್ಡಿ, ಶ್ರೀಧರ, ಡಿ. ವಿಠೋಬಪ್ಪ, ಬಸವರಾಜಪ್ಪ, ಕುಂಚೂರು ಗ್ರಾಮ ಪಂಚಾಯ್ತಿ ಅಧ್ಯಕ್ಷ ಬಣಕಾರ, ಕೂಬ್ಯಾನಾಯ್ಕ ಪ್ರಭಾವತಿ ಕೃಷ್ಣಪ್ಪ, ಪಾಟೀಲ್, ಜಗನ್ನಾಥ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

## ರಾಣೇಬೆನ್ನೂರು : ಕವಿ ಮಾಗಿ ಬಾಗದ ಹೊರತು ಕಾವ್ಯ ರಚನೆ ಸಾಧ್ಯವಿಲ್ಲ




ರಾಣೇಬೆನ್ನೂರು, ಮೇ 16 - ಕಾವ್ಯ ದಿಢೀರಾದ ಹುಟ್ಟಲಾರದು. ಕವಿಯು ಮಾಗಿ ಬಾಗದ ಹೊರತು ಗಟ್ಟಿ ಕಾವ್ಯ ರಚನೆ ಸಾಧ್ಯವಾಗದು. ಕಾವ್ಯ ಮನಸ್ಸಿಗೆ ಮುಟ್ಟುವಂತಿರಬೇಕು ಎಂದು ಹಾವೇರಿಯ ಕವಯತ್ರಿ ಡಾ. ಪುಷ್ಪಾ ಶಲವಡಿಮಠ ಹೇಳಿದರು. ಮಹಾದೇವಕ್ಕ ಮಂಗಳವಾದ್ಯ ಸಂಗೀತ ತರಬೇತಿ ಸಂಸ್ಥೆಯ ಬಸವೇಶ್ವರ ಜಯಂತಿ ಕಾರ್ಯಕ್ರಮದ ಜಿಲ್ಲಾ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡುತ್ತಿದ್ದರು.

ಸೋಲು, ನೋವು, ಅವಮಾನಗಳು ಕಾವ್ಯದ ಹುಟ್ಟಿಗೆ ಕಾರಣವಾಗಲಿವೆ. ಕವಿ ಹೃದಯ ಸದಾ ತೆರೆದಿರಬೇಕು. ಕವಿ ಸಮಾಜ ಸುಧಾರಕನಾಗಿರುತ್ತಾನೆ. ಆ ದಿಶೆಯಲ್ಲಿ ಕಾವ್ಯಗಳ ರಚನೆ ಆಗಲಿವೆ ಎಂದು ಕಸಾಪ ಭವನದಲ್ಲಿ ನಡೆದ ಕವಿಗೋಷ್ಠಿಯಲ್ಲಿ ಡಾ. ಪುಷ್ಪಾ ಶಲವಡಿ ಮಠ ಹೇಳಿದರು.

ವೀರೇಶ ಜಂಬಗಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪ್ರಭಾಕರ ಶಿಗ್ಲಿ, ಪ್ರಕಾಶ ಸೊಪ್ಪಿನ, ಬಸವರಾಜ, ಚನಬಸಪ್ಪ ನಾಡಾರ, ಮಂಜುನಾಥ ಬೂದನೂರ, ಲಕ್ಷ್ಮಿ ಅಡಿಕೆ, ಪ್ರಕಾಶ ಮತ್ತಿತರರಿದ್ದರು. 25 ಕವಿಗಳ ಕವಿತೆ ವಚನ ಮಾಡಿದರು.

## ಸಂಗೀತದಿಂದ ಮನಸ್ಸಿನ ಖಿನ್ನತೆ ಮಾಯ



ದಾವಣಗೆರೆ, ಮೇ. 16 - ಸಂಗೀತಕ್ಕೆ ಮನಸ್ಸಿನ ಖಿನ್ನತೆ ವಾಸಿ ಮಾಡುವ ಗುಣವಿದೆ ಎಂದು ಸಂಗೀತ ನಿರ್ದೇಶಕ ಉಪಾಸನಾ ಮೋಹನ್ ಹೇಳಿದರು.


ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆ ಮತ್ತು ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ನಗರದ ಆರ್.ಎಚ್.ಗೀತಾ ಮಂದಿರದಲ್ಲಿ ನಡೆದ ಗೀತ ಗಾಯನ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರಾದ ಶೋಭಾ ರಂಗನಾಥ್ ಮಾತನಾಡಿ, ಮಕ್ಕಳು ಪಠ್ಯ ಹಾಗೂ ಅಂಕಗಳಿಗೆ ಸೀಮಿತವಾಗದೇ ಸಂಗೀತ ಕಲಿಕೆ ಶಿಕ್ಷಣಕ್ಕೂ ಮಹತ್ವ ನೀಡಬೇಕು ಎಂದರು.

ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕಿ ಜ್ಯೋತಿ ಗಣೇಶ್ ಶೆಣೈ, ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ, ತಾಲ್ಲೂಕು ಘಟಕದ ಅಧ್ಯಕ್ಷೆ ಮಾಧುರಿ ಶೇಷಗಿರಿ, ಆಕಾಶವಾಣಿ ಕಲಾವಿದ ಅಜಯ್ ನಾರಾಯಣ್, ಹಾಲಸ್ವಾಮಿ, ಜೆ. ಶಿಲ್ಪ ಇದ್ದರು.

# ಬಸವ ಪ್ರಜ್ಞೆ, ತತ್ವ ಸಿದ್ಧಾಂತ ಆಚರಣೆಗೆ ಬರಬೇಕು

## ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಆಶಯ



ಸಾಣೇಹಳ್ಳಿ, ಮೇ 16 - ಬಸವಣ್ಣನವರನ್ನು ಪೂಜೆಗೆ ಸೀಮಿತಗೊಳಿಸದೇ ಬಸವ ಪ್ರಜ್ಞೆ ಹಾಗೂ ಅವರ ತತ್ವ, ಸಿದ್ಧಾಂತಗಳನ್ನು ಆಚರಣೆಗೆ ತರಬೇಕು ಎಂದು ಶ್ರೀ ಪಂಡಿತಾರಾಧ್ಯ ಶಿವಾಚರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಗುರುಬಸವ ಮಹಾಮನೆಯಲ್ಲಿ ಇತ್ತಿಚೇಗೆ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿ, ಬಸವಣ್ಣನವರು ಜಗತ್ತಿಗೇ ಬೆಳಕನ್ನು ಕೊಡುವ ಕಾರ್ಯದ ಜತೆಗೆ ಅಹಂ ಕಾರ ತೊರೆದು, ಪ್ರತಿಯೊಬ್ಬರನ್ನೂ ಅಪ್ಪಿಕೊಂಡಿದ್ದಾರೆ ಎಂದರು. ಅಸ್ಪೃಷ್ಯರು ಹಾಗೂ ತಳಸಮುದಾಯದ ಜನರನ್ನು ಅನುಭವ ಮಂಟಪಕ್ಕೆ ಕರೆಸಿ ಹಲವು ಆಲೋಚನೆಗಳನ್ನು ಕೊಟ್ಟು ವಚನಗಳನ್ನು ಬರೆಸಿದರು ಮತ್ತು ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಡುವ ಪ್ರಯತ್ನ ಮಾಡಿದ್ದರು ಎಂದು ತಿಳಿಸಿದರು.

ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದರೂ ಸ್ವಾರ್ಥಕ್ಕಾಗಿ ಅಧಿಕಾರ ನಡೆಸದೇ ಸಮಾಜದ ಉದ್ಧಾರಕ್ಕಾಗಿ ಶ್ರಮಿಸಿದರು ಎಂದು ಬಸವರನ್ನು ಸ್ಮರಿಸಿದರು.

ವಿಶ್ವಗುರು ಹಾಗೂ ಸಾಂಸ್ಕೃತಿಕ ನಾಯಕ ಎಂದು ಕರೆಯಿಸಿಕೊಳ್ಳುವ ಏಕೈಕ ವ್ಯಕ್ತಿಯೇ ಬಸವಣ್ಣ, ನಮ್ಮ ಶಿವಾಚಾರ್ಯ ಶ್ರೀಗಳು ಬಸವಣ್ಣರನ್ನು ಗೃಹಸ್ಥ ಜಗದ್ಗುರು ಬಸವಣ್ಣ ಎಂದು ಹೇಳುತ್ತಿದ್ದರು ಎಂದರು.

ವೀಣಾ ಮಾತನಾಡಿ, ಸಮಾಜದ ಅಭ್ಯುದಯಕ್ಕಾಗಿ ಅನುಭವ ಮಂಟಪ ಸ್ಥಾಪಿಸಿ, ಅಲ್ಲಮ ಪ್ರಭುಗಳನ್ನು ಅಧ್ಯಕ್ಷರನ್ನಾಗಿಸಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿದರು ಎಂದು ತಿಳಿಸಿದರು.

ಇಷ್ಟಲಿಂಗದ ಪರಿಕಲ್ಪನೆ ಮೂಲಕ ಸಮಾಜವಾದ ಮತ್ತು ಸಮತಾವಾದ ತತ್ವಗಳನ್ನು ಜಾರಿಗೆ ತಂದು ಅಂತರ್ ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡುವ ಜತೆಗೆ, ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಪ್ರಾಚಾರ್ಯ ನಟರಾಜ್ ಹೊನ್ನವಳ್ಳಿ, ಶಿಕ್ಷಕಿ ಸುಧಾ, ಸ್ಥಳೀಯರಾದ ಕೃಷ್ಣಪ್ಪ, ಹೊನ್ನೇಶಪ್ಪ, ಶಿವಕುಮಾರ್ ಮತ್ತಿತರರಿದ್ದರು.

ಅಕ್ಕನ ಬಳಗದವರು ವಚನ ಗಾಯನ ಮಾಡಿದರು. ಸಾಣೇಹಳ್ಳಿಯ ಶಾಲಾ ಮಕ್ಕಳು ವಚನ ನೃತ್ಯ ಪ್ರದರ್ಶಿಸಿದರು.

## ಮತ ಎಣಿಕೆ ನಂತರವೂ ಆಂಧ್ರದಲ್ಲಿ ಕೇಂದ್ರೀಯ ಪಡೆಗಳ ನಿಯೋಜನೆ

ನವದೆಹಲಿ, ಮೇ 16 – ಚುನಾವಣೆ ನಂತರ ಆಂಧ್ರ ಪ್ರದೇಶದಲ್ಲಿ ಹಿಂಸಾಚಾರ ಸಂಭವಿಸಿರುವ ಹಿನ್ನೆಲೆಯಲ್ಲಿ, ಮತಗಳ ಎಣಿಕೆಯ ನಂತರವೂ ಕೇಂದ್ರೀಯ ಪಡೆಗಳ 25 ಕಂಪನಿಗಳನ್ನು ರಾಜ್ಯದಲ್ಲೇ ಮುಂದುವರೆಸಬೇಕು ಎಂದು ಚುನಾವಣಾ ಆಯೋಗ ನಿರ್ದೇಶನ ನೀಡಿದೆ.

ಹಿಂಸಾಚಾರದ ಘಟನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಮುಖ್ಯ ಕಾರ್ಯದರ್ಶಿ ಹಾಗೂ ಪೊಲೀಸ್ ಮುಖ್ಯಸ್ಥರ ಬಳಿ ಚುನಾವಣಾ ಆಯೋಗ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಇಂತಹ ಘಟನೆಗಳು ಪುನರಾವರ್ತನೆಯಾಗಬಾರದು. ಇದಕ್ಕಾಗಿ ರಾಜ್ಯದ ಎಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಬೇಕು. ತ್ವರಿತವಾಗಿ ಎಫ್.ಐ.ಆರ್.ಗಳನ್ನು ದಾಖಲಿಸಬೇಕು ಎಂದು ಆಯೋಗ ಹೇಳಿದೆ.

ಸೋಮವಾರ ಹಾಗೂ ಮಂಗಳವಾರ ನಡೆದ ಹಿಂಸಾಚಾರದ ಘಟನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಮುಖ್ಯ ಕಾರ್ಯದರ್ಶಿ ಕೆ.ಎಸ್. ಜವಾಹರ್ ರೆಡ್ಡಿ ಹಾಗೂ ಡಿಜಿಪಿ ಹರೀಶ್ ಗುಪ್ತ ಅವರು ಚುನಾವಣಾ ಆಯೋಗದ ಎದುರು ಖುದ್ದು ಹಾಜರಾಗಿ ವಿವರಣೆ ಸಲ್ಲಿಸುವಂತೆ ತಿಳಿಸಲಾಗಿತ್ತು.

## ಮಕ್ಕಳನ್ನು ರಕ್ಷಿಸುವಲ್ಲಿ ಫೇಸ್‌ಬುಕ್ ವಿಫಲ

(1ನೇ ಪುಟದಿಂದ) ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂಗಳು ಮಕ್ಕಳಲ್ಲಿನ ದೌರ್ಬಲ್ಯ ದುರ್ಬಳಕೆ ಮಾಡಿಕೊಳ್ಳುವ ರೀತಿಯ ವಿಡಿಯೋ ಹಾಗೂ ಪೋಸ್ಟ್‌ಗಳಿಗೆ ಅವಕಾಶ ನೀಡುತ್ತಿವೆ ಎಂದು ಆರೋಪಿಸಲಾಗಿದೆ. ಅಪ್ರಾಪ್ತರ ರಕ್ಷಣೆಗಾಗಿ ಜಾಲತಾಣ ಕಂಪನಿಗಳು ಕಠಿಣ ನಿಯಮಗಳನ್ನು ಹೊಂದಬೇಕು ಎಂದು ಯುರೋಪ್‌ನ ಇತ್ತೀಚಿನ ಕಾಯ್ದೆಯಲ್ಲಿ ಹೇಳಲಾಗಿದೆ. ಇದಕ್ಕೂ ಮುಂಚೆ ಟಿಕ್‌ಟಾಕ್ ಬಗ್ಗೆಯೂ ಇದೇ ರೀತಿಯ ಎರಡು ತನಿಖೆಗಳನ್ನು ಆರಂಭಿಸಲಾಗಿತ್ತು.

## ರಾಜ್ಯ ಶಿಕ್ಷಣ ನೀತಿ ಸ್ವಾಗತಾರ್ಹ : ಡಾ. ಕುಬೇರಪ್ಪ



ದಾವಣಗೆರೆ, ಮೇ 16- ರಾಷ್ಟ್ರೀಯ ಶಿಕ್ಷಣ ನೀತಿ ಖಂಡಿಸಿ, ರಾಜ್ಯದ ನೂತನ ಶಿಕ್ಷಣ ನೀತಿಯನ್ನು ಸ್ವಾಗತಿಸುವುದಾಗಿ ಕೆಪಿಸಿಸಿ ಪದವೀಧರ ಘಟಕದ ರಾಜ್ಯಾಧ್ಯಕ್ಷ ಡಾ.ಆರ್.ಎಂ. ಕುಬೇರಪ್ಪ ತಿಳಿಸಿದ್ದಾರೆ.

ಬಿಜೆಪಿಯವರು ರಾಷ್ಟ್ರೀಯ ಶಿಕ್ಷಣ ನೀತಿ ಹೆಸರಿನಲ್ಲಿ 4 ವರ್ಷದ ಪದವಿ ಮತ್ತು ಅವೈಜ್ಞಾನಿಕ ಕ್ರೆಡಿಟ್ ಬ್ಯಾಂಕ್ ನಿರ್ಮಿಸಿ ಉನ್ನತ ಶಿಕ್ಷಣದ ಮಾನ ಹರಾಜು ಗೊಳಿಸಿದ್ದಾರೆ.

ಎನ್‌ಇಪಿ ಶಿಕ್ಷಣ ನೀತಿ ಜಾರಿಯಾದ ಮೇಲೆ ಅಧ್ಯಾಪಕರಿಗೆ ವಿ.ವಿ ಪಠ್ಯಕ್ರಮ ಹೊರತು ಪಡಿಸಿದರೆ ಪಾಠ ಮಾಡಲು ಒಂದು ಪುಸ್ತಕವು ಪೂರೈಕೆಯಾಗಲಿಲ್ಲ ಮತ್ತು ಮಕ್ಕಳಿಗೆ ಅಭ್ಯಾಸ ಮಾಡಲು ಪಠ್ಯಪುಸ್ತಕ ಸಿಗದಿದ್ದಲ್ಲಿ ಯೂಟ್ಯೂಬ್, ಗೂಗಲ್ ಸಹಾಯದಿಂದ ಅಭ್ಯಾಸ ಮಾಡುವ ದುಸ್ಥಿತಿ ಉನ್ನತ ಶಿಕ್ಷಣಕ್ಕೆ ಬಂದಿತ್ತು ಎಂದರು.

ಎನ್‌ಇಪಿ ಶಿಕ್ಷಣ ನೀತಿಯಲ್ಲಿ ಪದವಿ ಮುಗಿಸಿದ ಯಾವ ವಿದ್ಯಾರ್ಥಿಗಳಿಗೂ ಇದು ವರೆಗೆ ಓರಿಜನಲ್ ಮಾರ್ಕ್ಸ್ ಕಾರ್ಡ್ ದೊರೆತಿಲ್ಲ ಎಂದು ಸಂಕನೂರ್ ಅವರಿಗೆ ಪ್ರತಿಕ್ರಿಯೆ ಕೊಟ್ಟಿದ್ದಾರೆ.

ಕರಡು ಪ್ರತಿ ಸಾರ್ವಜನಿಕ ಅಭಿಪ್ರಾಯಕ್ಕೆ ಬಿಡದೇ ಶೈಕ್ಷಣಿಕ ಮಂಡಳಿ ಅಭಿಪ್ರಾಯವೂ ಸ್ವೀಕರಿಸಲಿಲ್ಲ ಮತ್ತು ಆಯಾ ರಾಜ್ಯಗಳ ಸದನಗಳಲ್ಲಿ ಚರ್ಚಿಸದೇ ದಿಢೀರ್‌ನೇ ಎಲ್ಲಾ ರಾಜ್ಯಗಳಲ್ಲೂ ಎನ್‌ಇಪಿ ಜಾರಿ ಗೊಳಿಸಿದ್ದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದ್ದಾರೆ.

ಸರಿಯಾಗಿ ಮಾಹಿತಿ ಇಲ್ಲದ ಎಬಿವಿಪಿ ಹುಡುಗರನ್ನು ಶಿಕ್ಷಣದ ವ್ಯವಸ್ಥೆ ವಿರುದ್ಧ ಎತ್ತಿ ಕಟ್ಟುವುದು ಅತ್ಯಂತ ಪಾಪದ ಕೆಲಸ. ಆದ್ದರಿಂದ ಕೆಲವರು ಹಠಮಾರಿತನದ ಹೇಳಿಕೆ ಕೊಡುವುದನ್ನು ನಿಲ್ಲಿಸಬೇಕೆಂದು ಡಾ. ಕುಬೇರಪ್ಪ ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

## ವಿದ್ಯಾರ್ಥಿಗಳಿಗೆ ಸ್ವಯಂ ಪ್ರೇರಣೆ ಕೌಶಲ್ಯ ಮುಖ್ಯ



ದಾವಣಗೆರೆ, ಮೇ 16- ವಿದ್ಯಾರ್ಥಿಗಳು ತಮ್ಮ ಕಲಿಕೆಯಲ್ಲಿ ಸ್ವಯಂ ಪ್ರೇರಣೆ, ಸಮಯ ನಿರ್ವಹಣೆ ಮತ್ತು ನಿರ್ಣಾಯಕ ಕೌಶಲ್ಯ ಅಭಿವೃದ್ಧಿ ಪಡಿಸಿಕೊಳ್ಳುವಂತೆ ಬೋಶ್ ಇಂಡಿಯಾ ಫೌಂಡೇಶನ್‌ನ ಡಾ.ಓ.ಪಿ ಗೋಯಲ್ ಸಲಹೆ ನೀಡಿದರು.

ನಗರದ ಜಿ.ಎಂ ವಿಶ್ವವಿದ್ಯಾಲಯದ ಎಂಬಿಎ ವಿಭಾಗದಲ್ಲಿ ಇತ್ತೀಚೆಗೆ ನಡೆದ 3ದಿನಗಳ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದ 2ನೇ ದಿನದಂದು 'ಭವಿಷ್ಯದ ಯಶಸ್ಸಿಗೆ ಕೌಶಲ್ಯ ಆಧಾರಿತ ಪಠ್ಯಕ್ರಮ' ಮತ್ತು 'ವಿದ್ಯಾರ್ಥಿ ಕೇಂದ್ರಿತ ಕಲಿಕೆ' ವಿಷಯ ಆಧರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಹೆಚ್ಚಿನ ಶ್ರಮದೊಂದಿಗೆ ವಿಮರ್ಶಾತ್ಮಕ ಚಿಂತನೆ, ಸಾಂಸ್ಕೃತಿಕ ತಿಳುವಳಿಕೆ, ಸಹಾನುಭೂತಿ ಮತ್ತು ಸಹಯೋಗದಂತಹ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದರು.

ಈ ವೇಳೆ ಡಾ. ಲೆಬರ್ನ್ ರೋಸ್, ಡಾ. ಲಾರೆನ್ಸ್ ಫಿಶೆರ್, ಜಿ.ಎಂ ವಿವಿ ಕುಲಪತಿ ಡಾ.ಎಸ್.ಆರ್ ಶಂಖಪಾಲ್, ಉಪಕುಲಪತಿ ಡಾ.ಡಿ. ಮಹೇಶಪ್ಪ, ರಿಜಿಸ್ಟಾರ್ ಡಾ.ಬಿ.ಎಸ್. ಸುನೀಲ್ ಕುಮಾರ್, ನಿರ್ದೇಶಕ ಡಾ. ಬಕ್ಕಪ್ಪ, ಕಾಲೇಜಿನ ಪ್ರಾಚಾರ್ಯ ಡಾ.ಎಂ.ಬಿ. ಸಂಜಯ್ ಪಾಂಡೆ, ಎಂಬಿಎ ವಿಭಾಗದ ಮುಖ್ಯಸ್ಥ ಡಾ.ಪಿ.ಎಸ್ ಬಸವರಾಜ್ ಮತ್ತು ಇತರರು ಇದ್ದರು.

## ವಿಕಲಚೇತನರ ಮಕ್ಕಳಿಗೆ 6ನೇ ತರಗತಿ ಪ್ರವೇಶಕ್ಕೆ ಅವಕಾಶ

ದಾವಣಗೆರೆ, ಮೇ 16 - ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯ ನಿರ್ವಹಿಸು ತ್ತಿರುವ 826 ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ.ಬಿ.ಅರ್.ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾ ಗಾಂಧಿ, ಏಕಲವ್ಯ ಮಾದರಿ ವಸತಿ ಶಾಲೆ, ಕಾಲೇಜು ಗಳ ಪೈಕಿ 807 ವಸತಿ ಶಾಲೆಗಳಲ್ಲಿ ಶೇ.25ಕ್ಕಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು, ಹೆಚ್.ಐ.ವಿಗೆ ತುತ್ತಾದ ಪೋಷಕರ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳಿಗೆ ಶೇ.10 ಮೀಸಲಾತಿಯನ್ನು ನಿಗದಿಪಡಿಸಿ 6ನೇ ತರಗತಿ ಪ್ರವೇಶ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ವಸತಿ ನಿಲಯಗಳ ಮೇಲ್ವಿಚಾರ ಕರನ್ನು ಸಂಪರ್ಕಿಸಬೇಕೆಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀ ಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ಜನರಲ್ಲಿ ಅಡ್ಡ ಪರಿಣಾಮ !

(1ನೇ ಪುಟದಿಂದ) ಭಾರತ್ ಬಯೋಟೆಕ್, ಕೊವ್ಯಾಕ್ಸಿನ್ ಲಸಿಕೆ ಸುರಕ್ಷಿತ ಎಂಬುದನ್ನು ಹಲವು ಅಧ್ಯಯನಗಳು ತಿಳಿಸಿವೆ. ಈ ಬಗ್ಗೆ ನಿಯತಕಾಲಿಕಗಳಲ್ಲಿ ಪರಿಣಿತರ ಪರಿಶೀಲನೆಗೆ ಒಳಗಾದ ವರದಿಗಳು ಪ್ರಕಟವಾಗಿವೆ ಎಂದು ಹೇಳಿದೆ.

## ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ

ದಾವಣಗೆರೆ, ಮೇ 16 -ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಮತ್ತು ಪರಿಸರ ಸಂಘ ಇವರುಗಳ ವತಿಯಿಂದ ಭೂ ಸುಧಾರಣೆ ಹಾಗೂ ಮರುಭೂಮೀಕರಣ ಮತ್ತು ಬರ ಸ್ಥಿತಿಸ್ಥಾಪಕತ್ವ ಎಂಬ ಶೀರ್ಷಿಕೆಯಡಿಯಲ್ಲಿ ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಜೂನ್ 8 ರಂದು ಕನ್ನಡ ಮತ್ತು ಇಂಗ್ಲಿಷ್- 1000 ಪದಗಳಿಗೆ ಮೀರದಂತೆ ಭೂಮಿ ಮತ್ತು ಮಣ್ಣಿನ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳು ವಿಷಯದ ಮೇಲೆ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ.

ಭಾಗವಹಿಸುವ ವಿದ್ಯಾರ್ಥಿಗಳು ಅಕಾಡೆಮಿಯ ಇ-ಮೇಲ್ essay.ksta@gmail.comಗೆ ಹೆಸರು, ಮೊಬೈಲ್ ಸಂಖ್ಯೆ, ಶಾಲೆಯ ಹೆಸರು, ಪ್ರಬಂಧದ ಭಾಷೆ ಕನ್ನಡ, ಆಂಗ್ಲ ಭಾಷೆಯಲ್ಲಿ ಬರೆದು ಪೋಸ್ಟ್ ಮೂಲಕ ಮೇ 27 ರೊಳಗಾಗಿ ಕಚೇರಿ ಕಳುಹಿಸುವುದು. ಹೆಚ್ಚಿನ ಮಾಹಿತಿಗಾಗಿ ಮೊ.9008675123 ಸಂಪರ್ಕಿಸಲು ರಿಜಿಸ್ಟ್ರಾರ್ ಎ.ಎಂ.ರಮೇಶ್ ತಿಳಿಸಿದ್ದಾರೆ.

# ಸರ್ಕಾರಿ ಕಛೇರಿಗಳಿಂದ ತೊಂದರೆಯಾದರೆ ನಿರ್ಭೀತಿಯಿಂದ ದೂರು ಸಲ್ಲಿಸಲು ಕರೆ

## ಹೊನ್ನಾಳಿ : ಸಾರ್ವಜನಿಕರ ಸಭೆಯಲ್ಲಿ ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್.ಕೌಲಾಪುರೆ



ಹೊನ್ನಾಳಿ, ಮೇ 16 - ಸರ್ಕಾರಿ ಅಧಿಕಾರಿಗಳು ವಿಳಂಬ ಧೋರಣೆ ತೋರದೇ ಸಕಾಲದಲ್ಲಿ ಸಾರ್ವಜನಿಕರ ಕೆಲಸಗಳನ್ನು ಮಾಡಿಕೊಡಬೇಕು ಎಂದು ದಾವಣಗೆರೆ ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್.ಕೌಲಾಪುರೆ ಸೂಚಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕಾರ ಹಾಗೂ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಮತ್ತು ಕರ್ನಾಟಕ ಲೋಕಾಯುಕ್ತ ಕಾಯ್ದೆ ಬಗ್ಗೆ ಅರಿವು ಮೂಡಿಸಲು ಹಮ್ಮಿಕೊಂಡಿದ್ದ ಅಧಿಕಾರಿಗಳು ಮತ್ತು ಸಾರ್ವಜನಿಕರ ಸಭೆಯಲ್ಲಿ ಅವರು ಮಾತನಾಡಿದರು.

ಸರ್ಕಾರವು ನಿಗದಿ ಪಡಿಸಿದ ಶುಲ್ಕವನ್ನು ಮಾತ್ರವೇ ಪಡೆಯಬೇಕು ಎಂದು ಕಾನೂನು ಇದ್ದರೂ ಅಧಿಕಾರಿಗಳು ನಿಗದಿಪಡಿಸಿದ ಹಣಕ್ಕಿಂತ ಹೆಚ್ಚಿನ ಹಣ ಕೇಳುತ್ತಾರೆ. ಒಂದು ವೇಳೆ ಹಣ ನೀಡದಿದ್ದರೆ ವಿನಾ ಕಾರಣ ಕೆಲಸ ಮಾಡಿಕೊಡದೇ ಸತಾಯಿಸುತ್ತಾರೆ ಎಂಬ ದೂರುಗಳು ನಮ್ಮ ಇಲಾಖೆಗೆ ಬರುತ್ತಲೇ ಇರುತ್ತವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರವು ಸಾರ್ವಜನಿಕರ ತೆರಿಗೆ ಹಣದಿಂದ ನಮಗೆ ಸಂಬಳ ಮತ್ತಿತರೆ ಸೌಲಭ್ಯಗಳನ್ನು ನೀಡುತ್ತಾದದರೂ ಅಧಿಕಾರಿಗಳು ಸಾರ್ವಜನಿಕರಿಗೆ ಪದೇ - ಪದೇ ತೊಂದರೆ ಕೊಡುತ್ತಿರುವುದು ಸರಿಯಲ್ಲವೆಂದು ಕಿವಿ ಮಾತು ಹೇಳಿದರು.

ಹೊನ್ನಾಳಿ ತಾಲ್ಲೂಕಿನ ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು ವಿಳಂಬ ನೀತಿ ತೋರಿದರೆ, ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ತಾರತಮ್ಯ ನೀತಿ ಅನುಸರಿಸಿದರೆ, ಕಳಪೆ ಕಾಮಗಾರಿ ಮತ್ತು ಹಣ ದುರುಪಯೋಗ ಕುರಿತ ದೂರುಗಳನ್ನು ಸಾರ್ವಜನಿಕರು ಪ್ರಪತ್ರ-1 ಮತ್ತು 2 ರಲ್ಲಿ ಅಫಿಡೆವಿಟ್‌ನೊಂದಿಗೆ ನಿರ್ಭೀತಿಯಿಂದ ಅರ್ಜಿ ಸಲ್ಲಿಸಬಹುದು. ಒಂದು ವೇಳೆ ದೂರುಗಳಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿಯಿದ್ದರೆ ಅಂತಹ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ಸ್ಪಷ್ಟಪಡಿಸಿದರು.

ಅಕ್ರಮ ಮರಳುಗಾರಿಕೆಗೆ ಸಂಬಂಧಪಟ್ಟಂತೆ 1 ಮತ್ತು ಕಂದಾಯ ಇಲಾಖೆಗೆ ಸಂಬಂಧಪಟ್ಟ 2 ದೂರುಗಳು ದಾಖಲಾಗಿದ್ದು, ಅಧಿಕಾರಿಗಳಿಗೆ 15 ದಿನಗಳೊಳಗೆ ಈ ದೂರುಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ನೀಡುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.


ಬರಗಾಲವಿರುವ ಪ್ರಯುಕ್ತ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ನೋಡಿಕೊಳ್ಳಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಬಗ್ಗೆ ವಿಶೇಷ ಗಮನಹರಿಸಬೇಕು ಮತ್ತು ಅರಣ್ಯ ಇಲಾಖೆಯವರು ಪ್ರಾಣಿಗಳಿಗೆ ಸಮರ್ಪಕ ನೀರಿನ ವ್ಯವಸ್ಥೆಯನ್ನು ಮಾಡಿ, ಗ್ರಾಮಗಳಿಗೆ ಪ್ರಾಣಿಗಳು ನುಗ್ಗದಂತೆ ಕ್ರಮ ಜರುಗಿಸಬೇಕೆಂದು ಸಲಹೆ ನೀಡಿದರು.

ಸಭೆಯಲ್ಲಿ ಡಿ.ವೈ.ಎಸ್.ಪಿ. ಕಲಾವತಿ, ಪೊಲೀಸ್ ಇನ್‌ಸ್ಪೆಕ್ಟರ್‌ಗಳಾದ ಮಧುಸೂದನ್, ಪ್ರಭು ಡಿ. ಸೂರಿನ, ಹೆಚ್.ಎಸ್.ರಾಷ್ಟ್ರಪತಿ, ಸಿಬ್ಬಂದಿಗಳಾದ ಗಿರೀಶ್, ಲಿಂಗೇಶ್, ಬಸವರಾಜ್, ಉಪವಿಭಾಗಾಧಿಕಾರಿ ವಿ.ಅಭಿಷೇಕ್, ತಹಶೀಲ್ದಾರ್‌ಗಳಾದ ಪುರಂದರ ಹೆಗ್ಡೆ, ಫಿರೋಜ್ ಷಾ ಸೋಮನಕಟ್ಟಿ, ಪುರಸಭಾ ಮುಖ್ಯಾಧಿಕಾರಿ ಹೆಚ್. ನಿರಂಜನಿ, ತಾಲ್ಲೂಕು ಪಂಚಾಯ್ತಿ ಸದಸ್ಯರುಗಳಾದ ಹೆಚ್.ವಿ.ರಾಘವೇಂದ್ರ, ಡಿ.ಎಸ್.ಸುಮಾ ಸೇರಿದಂತೆ ಅವಳಿ ತಾಲ್ಲೂಕುಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಪಂಚಮಸಾಲಿ ಸಮಾಜದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ,ಮೇ 16 - ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾ ಘಟಕದ ವತಿಯಿಂದ ಅತಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಜಿಲ್ಲೆಯ ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳಿಂದ 'ಸ್ವಾಭಿಮಾನ ಪ್ರತಿಭಾ ಪುರಸ್ಕಾರ'ಕ್ಕಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಎಸ್.ಎಸ್.ಎಲ್.ಸಿ.ಯಲ್ಲಿ ಶೇ. 70 ಮತ್ತು ಪಿ.ಯು.ಸಿ.ಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಿ.ಜೆ.ಬಡಾವಣೆಯಲ್ಲಿರುವ ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಕಛೇರಿಯಲ್ಲಿ ಅಥವಾ ಸಮಾಜದ ಅಂತರ್ಜಾಲ ವೆಬ್‌ಸೈಟ್ www.panchamasali.org ನಲ್ಲಿ ಅರ್ಜಿಯನ್ನು ಪಡೆದು, ಮೇ 25ರ ಒಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ (08192)-222008 ಸಂಪರ್ಕಿಸಬಹುದು.

ದಿ|| ಕಾನಹಳ್ಳಿ ಪಾರ್ವತಮ್ಮ
ನಿಧನ : 18.05.2023

ಪ್ರಥಮ ಪುಣ್ಯಸ್ಮರಣೆ

ತಂದೆಯಾಗಿ, ತಾಯಿಯಾಗಿ, ನೇಗಿಲಯೋಗಿಯಾಗಿ
ಜೀವನ ಸಾಗಿಸಿದ ನೆನಪು ಅವಿಸ್ಮರಣೀಯ.
ತಾಯಿಯೇ ದೇವರೆಂದು ನಂಬಿದ ನಮಗೆ
ತಮ್ಮ ಜೀವನ ಶೈಲಿಯೇ ಸಾಕ್ಷಿ.

ದುಃಖತಪ್ತ ಕುಟುಂಬದವರು ಮತ್ತು ಬಂಧುಗಳು, ಮೊ : 99452 52472

ದಿನಾಂಕ 17.5.2024ರ ಶುಕ್ರವಾರ #259-A, ಎಸ್‌ಓಜಿ ಕಾಲೋನಿ, ದಾವಣಗೆರೆಯಲ್ಲಿ ಪ್ರಥಮ ವರ್ಷದ ಪುಣ್ಯ ಸ್ಮರಣೆ ಆಚರಿಸಲಾಗುವುದು.


## ಹರಿಹರದಲ್ಲಿ ಅಪರಿಚಿತ ವ್ಯಕ್ತಿ ಸಾವು




ಹರಿಹರ, ಮೇ 16 - ನಗರದ ಪೇಟೆ ಆಂಜನೇಯಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿ 50 ರಿಂದ 60 ವರ್ಷದ ಅಪರಿಚಿತ ವ್ಯಕ್ತಿ ಸಾವನ್ನಪ್ಪಿದ್ದು, ಮೃತ ವ್ಯಕ್ತಿಯ ಸುಳಿವು ಸಿಕ್ಕಲ್ಲಿ ಹರಿಹರ ಪೊಲೀಸ್ ಠಾಣೆಗೆ (08192 272016, 94808 03257)ಗೆ ಸಂಪರ್ಕಿಸಬಹುದು.

# ಕೇಜ್ರಿವಾಲ್ ಆಪ್ತ ಸಹಾಯಕನ ವಿರುದ್ಧ ಎಫ್.ಐ.ಆರ್.

ನವದೆಹಲಿ, ಮೇ 16 – ಆಮ್ ಆದ್ಮಿ ಪಾರ್ಟಿ ಸಂಸದೆ ಸ್ವಾತಿ ಮಲಿವಾಲ್ ಮೇಲೆ ನಡೆದ ಹಲ್ಲೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದು, ಇದರಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕನ ಹೆಸರನ್ನು ಆರೋಪಿಯಾಗಿ ಸೇರಿಸಲಾಗಿದೆ.

ಕೇಜ್ರಿವಾಲ್ ಆಪ್ತ ಸಹಾಯಕ ಬಿಭವ್ ಕುಮಾರ್ ಅವರು ಆರೋಪಿಯಾಗಿದ್ದಾರೆ. ಈ ಬಗ್ಗೆ ಕೇಜ್ರಿವಾಲ್ ಯಾವುದೇ ಹೇಳಿಕೆ ನೀಡಿಲ್ಲ.

ಈ ಘಟನೆಯ ಸಂಬಂಧ ಹಾಜರಾಗಲು ರಾಷ್ಟ್ರೀಯ ಮಹಿಳಾ ಆಯೋಗ ಕುಮಾರ್‌ಗೆ ನೋಟಿಸ್ ಕಳಿಸಿದೆ.

ಎ.ಸಿ.ಪಿ. ಪಿ.ಎಸ್. ಕುಶ್ವಾಹಾ ಅವರ ನೇತೃತ್ವದ ಇಬ್ಬರು ಸದಸ್ಯರ ತಂಡವು ಮಲಿವಾಲ್ ಅವರ ಹೇಳಿಕೆಯನ್ನು ಪಡೆದ ನಂತರ ಎಫ್.ಐ.ಆರ್. ದಾಖಲಿಸಲಾಗಿದೆ.

ಮುಖ್ಯಮಂತ್ರಿ ಹಾಗೂ ಆಮ್ ಆದ್ಮಿ ಪಾರ್ಟಿ ರಾಷ್ಟ್ರೀಯ ಸಂಚಾಲಕ ಕೇಜ್ರಿವಾಲ್ ಅವರ ಆಪ್ತ ಸಿಬ್ಬಂದಿ ತಮ್ಮ ಮೇಲೆ ಹಲ್ಲೆ ನಡೆಸಿರುವುದಾಗಿ ಮಲಿವಾಲ್ ಹೇಳಿದ್ದರು.

ಸೋಮವಾರ ಕೇಜ್ರಿವಾಲ್ ಭೇಟಿಗಾಗಿ ಅವರ ಅಧಿಕೃತ ನಿವಾಸಕ್ಕೆ ತೆರಳಿದಾಗ ಕುಮಾರ್ ಹಲ್ಲೆ ನಡೆಸಿದ್ದಾಗಿ ಮಲಿವಾಲ್ ಅವರು ಪೊಲೀಸರಿಗೆ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

## ಆರೈಕೆ ಆಸ್ಪತ್ರೆಯಲ್ಲಿ ದಾದಿಯರ ದಿನಾಚರಣೆ



ದಾವಣಗೆರೆ, ಮೇ 16- ನಗರದ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಅಂತರ ರಾಷ್ಟ್ರೀಯ ದಾದಿಯರ (ನರ್ಸ್) ದಿನಾಚರಣೆ ಆಚರಿಸಲಾಯಿತು.

'ನಮ್ಮ ನರ್ಸ್‌ಗಳು ನಮ್ಮ ಭವಿಷ್ಯ' ಎಂಬ ಸಂದೇಶದಡಿ ಈ ಕಾರ್ಯಕ್ರಮ ಆಯೋಜಿಸ ಲಾಗಿತ್ತು. ಆರೈಕೆ ಆಸ್ಪತ್ರೆ ಮುಖ್ಯಸ್ಥ ಡಾ. ಟಿ.ಜಿ. ರವಿಕುಮಾರ್ ಮಾತನಾಡಿ, ಅಂತರರಾಷ್ಟ್ರೀಯ ದಾದಿಯರ ದಿನದ ಪ್ರಾಮುಖ್ಯತೆಯನ್ನು ತಿಳಿಸಿದರು. ಈ ಸಮಯದಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಅವರು ತಮ್ಮ ವೃತ್ತಿಯಲ್ಲಿ ಲೇಡಿ ವಿತ್ ಲ್ಯಾಂಪ್ ' ಎಂದು ಏಕೆ ಕರೆಯುತ್ತಾರೆ ಎಂದು ತಿಳಿಸಿಕೊಟ್ಟರು

ವಿಶ್ವಯುದ್ಧದ ಸಂದರ್ಭದಲ್ಲಿ ಗಾಯಗೊಂಡಿದ್ದ ಸೈನಿಕರಿಗೆ ರಾತ್ರಿಯ ಸಮಯದಲ್ಲಿ ತಮ್ಮ ನರ್ಸಿಂಗ್ ಸೇವೆಯನ್ನು ನೀಡಿ ಆಧುನಿಕ ಪ್ರಪಂಚಕ್ಕೆ ತಮ್ಮ ಕೊಡುಗೆ ಯಾವ ರೀತಿ ಇರಬೇಕು ಎಂಬುದನ್ನು ತೋರಿಸಿಕೊಟ್ಟರು. ಯಾವುದೇ ಆಸ್ಪತ್ರೆ ಉತ್ತಮ ಸೇವೆಯನ್ನು ನೀಡಲು ನರ್ಸ್‌ಗಳ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದರು.

ಈ ಸಮಯದಲ್ಲಿ ಆರೈಕೆ ಹಾಸ್ಪಿಟಲ್ ನರ್ಸಿಂಗ್ ಸೂಪರಿಂಟೆಂಡೆಂಟ್, ಶ್ರೀಮತಿ ರೂಪ ಎಚ್.ಕೆ. ಅವರನ್ನು ಜಗಳೂರು ಮಾಜಿ ಶಾಸಕ ಮತ್ತು ಆರೈಕೆ ಗ್ರೂಪ್ಸ್ ನ ಅಧ್ಯಕ್ಷ ಟಿ. ಗುರುಸಿದ್ದನಗೌಡ್ರು ಸನ್ಮಾನಿಸಿದರು.

ಆಸ್ಪತ್ರೆಯ ಎಲ್ಲಾ ವೈದ್ಯರ ತಂಡ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಹೊಲಕ್ಕೆ ಭೇಟಿ ನೀಡಿ ಬೆಳೆ ಸಮೀಕ್ಷೆ ಮಾಡಲು ರೈತರ ಆಗ್ರಹ

### ಹತ್ತಿಪ್ಪತ್ತು ವರ್ಷದ ಶ್ರಮಕ್ಕೆ ನ್ಯಾಯ ಸೂಚಿಸುವಂತೆ ರೈತರ ಒತ್ತಾಯ

ದಾವಣಗೆರೆ, ಮೇ 16- ಜಿಲ್ಲಾಡಳಿತದ ಅಧಿಕಾ ರಿಗಳು ರೈತರ ಹೊಲಗಳಿಗೆ ಭೇಟಿ ನೀಡಿ ಬರ ಮತ್ತು ಉಷ್ಣಾಘಾತಕ್ಕೆ ಒಣಗಿ ನಾಶವಾದ ಬೆಳೆಗಳ ಸಮೀಕ್ಷೆ ನಡೆಸುವಂತೆ ಆಗ್ರಹಿಸಿ ಜಿಲ್ಲಾ ರೈತರ ಒಕ್ಕೂಟ, ಕುಕ್ಕುವಾಡ ಸಕ್ಕರೆ ಕಾರ್ಖಾನೆ ಕಬ್ಬು ಬೆಳೆಗಾರರ ಸಂಘದವರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.



ಈ ವೇಳೆ ರೈತ ಮುಖಂಡರು ಮಾತನಾಡಿ, ಜಿಲ್ಲೆಯ ಕುಕ್ಕುವಾಡ ಗ್ರಾಮದ ಸಕ್ಕರೆ ಕಂಪನಿ ವ್ಯಾಪ್ತಿಯಲ್ಲಿ ರೈತರು ಸುಮಾರು ಹತ್ತಿಪ್ಪತ್ತು ವರ್ಷಗಳಿಂದ ಬೆಳೆಸಿರುವ ಅಡಿಕೆ ಮತ್ತು ತೆಂಗಿನ ತೋಟಗಳು ಸೇರಿದಂತೆ ವಾರ್ಷಿಕ ಬೆಳೆ ಕಬ್ಬು ಭೀಕರ ಬರಕ್ಕೆ ಒಣಗಿ ನಾಶವಾಗಿವೆ ಎಂದು ಹೇಳಿದರು.

ನೀರಿಲ್ಲದೆ, ಬಿರು ಬಿಸಿಲಿನ ಝಳ ಮತ್ತು ಉಷ್ಣಾಘಾತಕ್ಕೆ ಬೆಳೆ ಕಳೆದುಕೊಂಡ ರೈತರು ತೀವ್ರ ಆರ್ಥಿಕ ನಷ್ಟ ಎದುರಿಸುತ್ತಿದ್ದು, ಜಾನುವಾರುಗಳಿಗೂ ಮೇವು-ನೀರು ಇಲ್ಲದೆ ರೈತರ ಬದುಕು ಸಂಕಷ್ಟಕ್ಕೀಡಾಗಿದೆ ಎಂದು ಹೇಳಿದರು. ಒಂದೆಡೆ ಅವೈಜ್ಞಾನಿಕ ಭದ್ರಾ ವೇಳಾಪಟ್ಟಿ ಮತ್ತೊಂದೆಡೆ ಕೊಳವೆಬಾವಿ ಬತ್ತಿ ಹೋಗಿದ್ದರಿಂದ ರೈತನ ಬದುಕು ಕಾದ ಹೆಂಚಿನ ಮೇಲೆ ಇದ್ದಂತೆ ಆಗಿದೆ. ಆದ್ದರಿಂದ ತಕ್ಷಣವೇ ಅಧಿಕಾರಿಗಳು ಹೊಲಗಳಿಗೆ ಭೇಟಿ ನೀಡಿ ಸಮೀಕ್ಷೆ ಮಾಡುವಂತೆ ಆಗ್ರಹಿಸಿದರು.

ಸತ್ತ ಜಾನುವಾರುಗಳ ನಷ್ಟ, ಬಿತ್ತನೆಗೆ ಬಳಕೆಯಾದ ವೆಚ್ಚ ಸೇರಿದಂತೆ ಒಣಗಿರುವ ಕಬ್ಬು, ಅಡಿಕೆ, ತೆಂಗು, ಬಾಳೆ ಬೆಳೆಗಳ ನಾಶದ ಅಂದಾಜಿನ ಜತೆಗೆ ಬೋರ್‌ವೆಲ್ ರಿಚಾರ್ಜ್ ಮಾಡುವಂತೆ ಅಧಿಕಾರಿಗಳಿಗೆ ಒತ್ತಾಯಿಸಿದರು.

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ತೇಜಸ್ವಿ ಪಟೇಲ್, ಬಲ್ಲೂರು ರವಿಕುಮಾರ, ರಾಘವೇಂದ್ರ ನಾಯ್ಕ್, ಹದಡಿ ಜಿ.ಸಿ. ನಿಂಗಪ್ಪ, ಕುಕ್ಕುವಾಡದ ರುದ್ರೇಗೌಡ್ರು, ಡಿ.ಬಿ. ಶಂಕರ್, ಕೆ.ಸಿ. ಶಿವಕುಮಾರ, ಕೆ.ಜಿ. ರವಿಕುಮಾರ, ಬಲ್ಲೂರು ಬಸವರಾಜು, ಮುದಹದಡಿ ದಿಳ್ಳೆಪ್ಪ, ಶಂಭುಲಿಂಗನಗೌಡ್ರು, ನಾಗರಸನಹಳ್ಳಿ ಚನ್ನಪ್ಪ, ಕೋಲೇನಹಳ್ಳಿ ಕೆ. ಶರಣಪ್ಪ, ಗುತ್ತಾಳ ಮಂಜುನಾಥ, ತುರ್ಚಘಟ್ಟದ ಶ್ರೀನಿವಾಸ ಮತ್ತು ಮುಖಂಡರು ಇದ್ದರು.

**ರೈತರ ಪಟ್ಟು, ಮಣಿಯದ ಜಿಲ್ಲಾಧಿಕಾರಿ..**

- ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಮನವಿ ಸ್ವೀಕರಿಸಿ, ಬೆಳೆ ಹಾನಿ ಸಮೀಕ್ಷೆ ನಡೆಸಲು ರಾಜ್ಯ ಸರ್ಕಾರ ಆದೇಶ ನೀಡಬೇಕು. ಈ ಮನವಿಯನ್ನು ಸರ್ಕಾರಕ್ಕೆ ಕಳುಹಿಸುತ್ತೇನೆ ಎಂದಾಗ, 'ಬಿ.ಎಂ. ಸತೀಶ್ ಅವರು, ನೀವೇ ಜಿಲ್ಲಾ ವಿಪತ್ತು ನಿರ್ವಹಣೆ ಪ್ರಾಧಿಕಾರದ ಅಧ್ಯಕ್ಷರಿದ್ದೀರಿ, ಆದ್ದರಿಂದ ನೀವೇ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿ ಎಂದು ಮನವಿ ಮಾಡಿದರು.
- ಬೇಗ ಬೆಳೆ ಸಮೀಕ್ಷೆ ಮಾಡಿದರೆ, ಮಳೆಯಾದ ಕೆಲವಡೆ ಬೇಗ ಬಿತ್ತನೆ ಮಾಡಲು ಅನುಕೂಲ ಆಗಲಿದೆ ಎಂದು ಮನವರಿಕೆ ಮಾಡಿದಾಗ, 'ಜಿಲ್ಲಾಧಿಕಾರಿಗಳು ಸರ್ಕಾರದಿಂದ ಸೂಚನೆ ಬಂದ ಮೇಲೆಯೇ ಕ್ರಮವಹಿಸುವುದಾಗಿ ತಿಳಿಸಿದರು.

## ಸಿರಿಗೆರೆಯ ಸದ್ಧರ್ಮ ನ್ಯಾಯಪೀಠಕ್ಕೆ ಬಿಡುವು



ಸಿರಿಗೆರೆ, ಮೇ 16- ಇಲ್ಲಿನ ತರಳಬಾಳು ಬೃಹನ್ಮಠದಲ್ಲಿ ಇದೇ ದಿನಾಂಕ 20ರ ಸೋಮವಾರ ನಡೆಯಬೇಕಿದ್ದ ಸದ್ಧರ್ಮ ನ್ಯಾಯಪೀಠದ ಕಾರ್ಯ ಕಲಾಪಗಳನ್ನು ಮುಂದೂಡಲಾಗಿದೆ. ಮಸ್ಕತ್ ಮತ್ತು ದುಬೈಗಳಲ್ಲಿ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮಗಳಲ್ಲಿ ಜಗದ್ಗುರು ಡಾ|| ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಪಾಲ್ಗೊಳ್ಳುವ ನಿಟ್ಟಿನಲ್ಲಿ ಪ್ರವಾಸ ಕೈಗೊಂಡಿರುವ ಕಾರಣ, ನ್ಯಾಯಪೀಠದ ಕಾರ್ಯ ಕಲಾಪಗಳು ನಡೆಯುವುದಿಲ್ಲ ಎಂದು ನ್ಯಾಯಪೀಠದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಲಾಕುಂಚದಿಂದ ಪ್ರಬಂಧ ಸ್ಪರ್ಧೆ

ದಾವಣಗೆರೆ, ಮೇ 16 - ಇಲ್ಲಿನ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ರಾಜ್ಯ ಮಟ್ಟದ ಉಚಿತ ಪ್ರಬಂಧ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಪ್ರಬಂಧ ಸ್ಪರ್ಧೆಯ ವಿಷಯ 'ಧರ್ಮಪತ್ನಿ' ಸಾರ್ವಜನಿಕವಾಗಿ ಯಾರಾದರೂ ಭಾಗವಹಿಸ ಬಹುದು. ವೈವಾಹಿಕ ಜೀವನದ ಬದುಕಿನ ಏಳು, ಬೀಳು, ಸುಖ, ದುಃಖ, ಸಂತೋಷದ ವಿಚಾರವಾಗಿ 3 ಪುಟಗಳು ಮೀರದಂತೆ ಮೇ 31ರ ಒಳಗಾಗಿ ಕಳಿಸಬೇಕು. ವಿವರಕ್ಕೆ ಸಂಪರ್ಕಿಸುವ ಮೊಬೈಲ್ 9538732777.

## ಎಸ್‌ಎಸ್‌ಎಲ್‌ಸಿ : ಹರ್ಷಿತಾಗೆ ಶೇ. 96.96



ದಾವಣಗೆರೆ, ಮೇ 16 - ನಗರದ ಶ್ರೀ ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಹರ್ಷಿತಾ ಎಸ್. 2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 606 ಅಂಕಗಳನ್ನು ಪಡೆದು ಶೇ. 96.96 ಫಲಿತಾಂಶ ಪಡೆದಿದ್ದಾರೆ. ಹರ್ಷಿತಾ, ಸುರೇಶ್ ಡಿ. ಮತ್ತು ತಾಯಿ ಗೌರಮ್ಮ ದಂಪತಿ ಪುತ್ರಿ.

# ಪೌರ ಕಾರ್ಮಿಕರಿಗೆ ಸರ್ಕಾರಿ ಸೌಲಭ್ಯ ವ್ಯವಸ್ಥಿತವಾಗಿ ತಲುಪಿಸಿ

### ಹೊನ್ನಾಳಿ : ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾಯಾಧೀಶ ಪುಣ್ಯಕೋಟಿ ನಿರ್ದೇಶನ

ಹೊನ್ನಾಳಿ, ಮೇ 16- ಪೌರ ಕಾರ್ಮಿಕರಿಗೆ ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ಸಮರ್ಪಕವಾಗಿ ವಿತರಿಸಬೇಕು ಎಂದು ಜೆಎಂಎಫ್‌ಸಿ ನ್ಯಾಯಾಲಯದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಪುಣ್ಯಕೋಟಿ ಸೂಚಿಸಿದರು.



ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಪುರಸಭೆ, ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಮತ್ತು ಕಾರ್ಮಿಕ ಇಲಾಖೆ ವತಿಯಿಂದ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪುರಸಭೆಯ ಪೌರ ಕಾರ್ಮಿಕರು ಖಾಯಂ ಮತ್ತು ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದು, ಇವರ ಕೆಲಸಕ್ಕೆ ಸರಿಯಾದ ವೇತನ ಪಡೆಯುವ ಹಕ್ಕಿದೆ. ಆದ್ದರಿಂದ ಯಾವುದೇ ತಾರತಮ್ಯವಾಗದಂತೆ ನೋಡಿಕೊಳ್ಳಬೇಕೆಂದು ಎಚ್ಚರಿಸಿದರು.

ಪುರಸಭೆಯ ಆಡಳಿತಾಧಿಕಾರಿ ಮತ್ತು ಉಪವಿಭಾಗಾಧಿಕಾರಿ ವಿ. ಅಭಿಷೇಕ್ ಮಾತನಾಡಿ, ಪೌರ ಕಾರ್ಮಿಕರಿಗೆ ಸರ್ಕಾರದಿಂದ ಸಾಕಷ್ಟು ಸೌಲಭ್ಯಗಳಿದ್ದು, ಅವುಗಳ ಅರಿವಿಲ್ಲದೇ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ಪೌರಕಾರ್ಮಿಕರು ಈ ಬಗ್ಗೆ ತಮ್ಮ ಮೇಲಾಧಿಕಾರಿಗಳಿಂದ ಮತ್ತು ತಮ್ಮ ಸಂಘಟನೆ ಮೂಲಕ ಮಾಹಿತಿ ಪಡೆದು ಸೌಲಭ್ಯಗಳ ಸದುಪಯೋಗಪಡಿಸಿಕೊಳ್ಳುವಂತೆ ಕರೆ ನೀಡಿದರು.

ಪೌರ ಕಾರ್ಮಿಕರಿಗೆ ಪುರಸಭೆಯಿಂದ ಸಿಗಬೇಕಾದ ಸೌಲಭ್ಯ ಮತ್ತು ಪರಿಕರಗಳ ಬಗ್ಗೆ ವಿವರಿಸಿ, ನಿಯಮಿತವಾಗಿ ಕುಟುಂಬ ಸಮೇತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಪುರಸಭೆ ಮುಖ್ಯಾಧಿಕಾರಿ ಎಚ್. ನಿರಂಜನಿ ಮಾತನಾಡಿ, ಪೌರ ಕಾರ್ಮಿಕರು ಸ್ವಚ್ಚತಾ ಕಾರ್ಯ ಮಾಡುವುದರಿಂದ ಸಮಾಜದ ಎಲ್ಲಾ ವರ್ಗದವರು ಆರೋಗ್ಯದಿಂದಿರಲು ಸಹಕಾರಿಯಾಗಿದೆ ಎಂದು ಪೌರ ಕಾರ್ಮಿಕರ ಕಾರ್ಯವನ್ನು ಶ್ಲಾಘಿಸಿದರು.

ಪೌರ ಕಾರ್ಮಿಕರು ಆರೋಗ್ಯ ಸಂಬಂಧಿತ ಇನ್ಶ್ಯೂರೆನ್ಸ್ ಪಾಲಿಸಿಗಳನ್ನು ಮಾಡಿಸಿಕೊಳ್ಳಲು ಮುಂದೆ ಬರುತ್ತಿಲ್ಲ, ಇನ್ನು ಮುಂದೆ ಯಾರೂ ನಿರ್ಲಕ್ಷ್ಯ ಮಾಡದೇ ಇನ್ಶ್ಯೂರೆನ್ಸ್ ಮಾಡಿಸಿಕೊಂಡರೆ ಅನಾರೋಗ್ಯದ ಕಾಲದಲ್ಲಿ ಅನುಕೂಲವಾಗಲಿದೆ ಎಂದು ಮನವರಿಕೆ ಮಾಡಿದರು.

ಪೌರ ಕಾರ್ಮಿಕ ಕುಟುಂಬಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರಿದ್ದರೆ ಅವರು ಕಾರ್ಮಿಕ ಇಲಾಖೆಯಿಂದ ಗುರುತಿನ ಚೀಟಿ ಪಡೆದು ಕಾರ್ಮಿಕ ಇಲಾಖೆಯ ಸೌಲಭ್ಯ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಕಾರ್ಮಿಕ ನಿರೀಕ್ಷಕರಾದ ಮುಮ್ತಾಜ್ ಬೇಗಂ ಕಾರ್ಮಿಕ ಇಲಾಖೆಯ ಸೌಲಭ್ಯಗಳ ಬಗ್ಗೆ ಮತ್ತು ಕಾಯ್ದೆಗಳ ಬಗ್ಗೆ ವಿವರಿಸಿದರು. ಪೌರ ಕಾರ್ಮಿಕರಿಗೆ ಸಂರಕ್ಷಣಾ ಉಪಕರಣ ವಿತರಿಸಲಾಯಿತು.

ಈ ವೇಳೆ ತಹಶೀಲ್ದಾರ್ ಪುರಂದರ ಹೆಗ್ಡೆ, ಸಹಾಯಕ ಸರ್ಕಾರಿ ಅಭಿಯೋಜಕ ಭೀಮಯ್ಯ, ವಕೀಲರ ಸಂಘದ ಅಧ್ಯಕ್ಷ ಕೆ.ಪಿ. ಜಯಪ್ಪ, ಉಪಾಧ್ಯಕ್ಷ ಚಂದ್ರಪ್ಪ ಮಡಿವಾಳ್, ಕಾರ್ಯದರ್ಶಿ ಬಿ.ಎಂ. ಪುರುಷೋತ್ತಮ್, ಪುರಸಭಾ ಎಂಜಿನಿಯರ್ ದೇವರಾಜ್, ಆರೋಗ್ಯ ನಿರೀಕ್ಷಕರಾದ ಪರಮೇಶ್ವರ್ ನಾಯ್ಕ್, ಹರ್ಷವರ್ಧನ್, ಸಿಬ್ಬಂದಿ ಮೋಹನ್, ರೋಹಿತ್, ರಂಜಿತಾ, ಮಾಲತೇಶ್, ಶಿವಣ್ಣ, ಭಾಗ್ಯಮ್ಮ ಮತ್ತಿತರರಿದ್ದರು.

## ಬರ ಪರಿಹಾರದ ಹಣ ಸಾಲಕ್ಕೆ ಜಮಾ

**ಕುಮಾರ ಸ್ವಾಮಿ ಆಕ್ಷೇಪ**

ಬೆಂಗಳೂರು, ಮೇ 16 - ಕೇಂದ್ರ ಸರ್ಕಾರದಿಂದ ರೈತರ ಖಾತೆಗಳಿಗೆ ಹಾಕಿದ್ದ ಬರ ಪರಿಹಾರ ಹಣವನ್ನು ಬ್ಯಾಂಕ್‌ಗಳು ಸಾಲಕ್ಕೆ ಜಮೆ ಮಾಡಿಕೊಳ್ಳುತ್ತಿವೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆಕ್ಷೇಪಿಸಿದ್ದಾರೆ.

ಕಳೆದ ಮುಂಗಾರು ಮತ್ತು ಹಿಂಗಾರು ಮಳೆ ಕೈಕೊಟ್ಟಿದ್ದರಿಂದ ರಾಜ್ಯದ ಬಹುತೇಕ ಭಾಗ ಬರಕ್ಕೆ ಸಿಲುಕಿ ರೈತರು ಕೈಗೆ ಬಂದ ಬೆಳೆಯನ್ನು ಕಳೆದುಕೊಂಡಿದ್ದರು. ಬೆಳೆ ಕಳೆದು ಕೊಂಡ ರೈತರಿಗೆ ಕೇಂದ್ರ ಸರ್ಕಾರ ಎನ್‌ಡಿಆರ್‌ಎಫ್ ನಿಯಮಾವಳಿ ಯಡಿ ಬೆಳೆ ಮತ್ತು ಭೂಮಿಯ ಆಧಾರದ ಮೇಲೆ ಪರಿಹಾರ ನೀಡಿತ್ತು. ರಾಜ್ಯ ಸರ್ಕಾರ 4,663.12 ಕೋಟಿ ರೂ. ಬೆಳೆ ಪರಿಹಾರ ಕೋರಿತ್ತು, ಆದರೆ ಕೇಂದ್ರ ಸರ್ಕಾರ 3,454 ಕೋಟಿ ರೂ. ಬಿಡುಗಡೆ ಮಾಡಿತ್ತು. ರಾಜ್ಯ ಸರ್ಕಾರ ಕಳುಹಿಸಿದ್ದ ವರದಿ ಆಧಾರದ ಮೇಲೆ ಪರಿಹಾರ ಹಣ ರೈತರ ಖಾತೆಗಳಿಗೆ ನೇರವಾಗಿ ತಲುಪಿತ್ತು.

ಇದರಲ್ಲಿ ಕೆಲವರಿಗೆ ಅಲ್ಪ ಮೊತ್ತದ ಹಣ ದೊರೆತಿದ್ದರೆ, ಇನ್ನು ಕೆಲವರಿಗೆ ಗೌರವಯುತ ಮೊತ್ತ ದೊರೆತಿತ್ತು.

ಬೆಳೆ ಕಳೆದು ಕೊಂಡ ಬಹುತೇಕ ರೈತರು ಬ್ಯಾಂಕ್‌ಗಳಲ್ಲಿ ಸಾಲ ಮಾಡಿದ್ದರು. ಪರಿಹಾರದ ಹಣ ಜಮೆ ಆಗುತ್ತಿದ್ದಂತೆ ಆ ಹಣವನ್ನು ಬ್ಯಾಂಕ್‌ಗಳು ಸಾಲದ ಖಾತೆಗೆ ವರ್ಗಾಯಿಸಿಕೊಂಡಿವೆ.

ಬ್ಯಾಂಕ್ ವರ್ತನೆಯನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತೀವ್ರವಾಗಿ ಖಂಡಿಸಿ, ಯಾವ ಕಡೆಯಿಂದ ನೋಡಿದರೂ ರೈತರ ಸಂಕಷ್ಟಕ್ಕೆ ಕೊನೆಯೇ ಇಲ್ಲದಂತಾಗಿದೆ ಎಂದಿದ್ದಾರೆ. ಹೆಸರಿಗೆ ಅನ್ನದಾತ ಆದರೆ, ಅವರ ಕಣ್ಣೀರು ಒರೆಸಿ ಅವರಿಗೆ ದಾತನಾಗಿ ನಿಲ್ಲಬೇಕಿದ್ದ ರಾಜ್ಯ ಸರ್ಕಾರ ಕೈಕಟ್ಟಿ ಕೂತಿದೆ ಎಂದು ಕಿಡಿ ಕಾರಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಕೇಂದ್ರ ಸರ್ಕಾರದಿಂದ ರೈತರ ಬ್ಯಾಂಕ್ ಖಾತೆಗಳಿಗೆ ಜಮೆಯಾಗಿದ್ದ ಬರ ಪರಿಹಾರ ಹಣವನ್ನು ಸಾಲಕ್ಕೆ ಜಮೆ ಮಾಡಿಕೊಳ್ಳುತ್ತಿರುವ ಬ್ಯಾಂಕ್‌ಗಳ ವರ್ತನೆ ನಿಜಕ್ಕೂ ಕ್ರೂರ ಮತ್ತು ಖಂಡನೀಯ ಎಂದಿದ್ದಾರೆ. ರಾಜ್ಯ ಸರ್ಕಾರ ಕೂಡಲೇ ಸಾಲ ನೀಡಿರುವ ಎಲ್ಲಾ ಬ್ಯಾಂಕ್‌ಗಳ ಮುಖ್ಯಸ್ಥರ ಸಭೆ ಕರೆದು ಈ ಬಗ್ಗೆ ಗಂಭೀರ ಚರ್ಚೆ ನಡೆಸಬೇಕು, ಬರ ಪರಿಹಾರ ಮೊತ್ತವನ್ನು ಸಾಲಕ್ಕೆ ಜಮೆ ಮಾಡಬಾರದು ಎಂದು ತಾಕೀತು ಮಾಡುವಂತೆ ಒತ್ತಾಯಿಸಿದ್ದಾರೆ.

## ವಿಮಾನಕ್ಕೆ ಬಾಂಬ್ ಬೆದರಿಕೆ

ನವದೆಹಲಿ, ಮೇ 16 - ದೆಹಲಿ ಹಾಗೂ ವಡೋದರ ಮಾರ್ಗದ ಏರ್ ಇಂಡಿಯಾ ವಿಮಾನಕ್ಕೆ ಬಾಂಬ್ ಬೆದರಿಕೆ ಎದುರಾಗಿತ್ತು. ವಿಮಾನದ ವಾಶ್‌ರೂಂನಲ್ಲಿ ಬಾಂಬ್ ಎಂದು ಬರೆದಿದ್ದ ಚೀಟಿಯೊಂದು ಕಂಡು ಬಂದು ಆತಂಕ ಸೃಷ್ಟಿಯಾಗಿತ್ತು. ಬುಧವಾರ ಈ ಚೀಟಿ ಕಂಡು ಬಂದ ನಂತರ ಸಮಗ್ರ ತಪಾಸಣೆ ನಡೆಸಲಾಗಿತ್ತು. ಆದರೆ, ಶಂಕಾಸ್ಪದ ಯಾವುದೇ ವಸ್ತು ಕಂಡುಬಂದಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

## ಮುಂಬೈ ಅವಘಡ : ಜಾಹೀರಾತು ಉದ್ಯಮದ ನಿರ್ದೇಶಕನ ಬಂಧನ

ಮುಂಬೈ, ಮೇ 16 – ಇಲ್ಲಿನ ಘಟ್ಕೋಪಾರ್‌ನಲ್ಲಿ ಬೃಹತ್ ಕಬ್ಬಿಣದ ಜಾಹೀರಾತು ಫಲಕ ಬಿದ್ದು 16 ಜನರ ಸಾವು ಸಂಭವಿಸಿದ ಪ್ರಕರಣಕ್ಕೆ ಸಂಬಂಧಿಸಿ ದಂತೆ, ಜಾಹೀರಾತು ಉದ್ಯಮದ ತಲೆಮರೆಸಿಕೊಂಡಿದ್ದ ನಿರ್ದೇಶಕನನ್ನು ಬಂಧಿಸಲಾಗಿದೆ. ಇಗೋ ಮೀಡಿಯಾ ಕಂಪನಿಯ ಭಾವೇಶ್ ಭಿಂಡೆ ಎಂಬ ವ್ಯಕ್ತಿಯನ್ನು ಉದಯಪುರದಲ್ಲಿ ಬಂಧಿಸಲಾಗಿದೆ. ಈ ಅವಘಡದಲ್ಲಿ ಮೃತಪಟ್ಟವರಲ್ಲಿ ಮುಂಬೈ ಎ.ಟಿ.ಸಿ. ಮಾಜಿ ಪ್ರಧಾನ ವ್ಯವಸ್ಥಾಪಕ ಮನೋಜ್ ಛನ್ಸೋರಿಯಾ ಹಾಗೂ ಅವರ ಪತ್ನಿ ಅನಿತಾ ಅವರೂ ಸೇರಿದ್ದರು.

## ಗೂಗಲ್‌ನಲ್ಲಿನ ನಕಲಿ ಸಂಪರ್ಕ ಸಂಖ್ಯೆ ತೆಗೆದು ಹಾಕಲು ಐಪಿಎಸ್ ಅಧಿಕಾರಿ ಆಗ್ರಹ

ದುರ್ಗ್, ಮೇ 16 - ಗೂಗಲ್‌ನಲ್ಲಿ ಕಂಡು ಬರುತ್ತಿರುವ ಗ್ರಾಹಕರ ಸಂಪರ್ಕದ ನಕಲಿ ಸಂಖ್ಯೆಗಳನ್ನು ತೆಗೆದು ಹಾಕುವಂತೆ ಛತ್ತೀಸ್‌ಘಡದ ಹಿರಿಯ ಐ.ಪಿ.ಎಸ್. ಅಧಿಕಾರಿಯೊಬ್ಬರು ಒತ್ತಾಯಿಸಿದ್ದಾರೆ. ಗೂಗಲ್‌ಗೆ ಪತ್ರವೊಂದನ್ನು ಬರೆದಿರುವ ದುರ್ಗ್ ವಲಯದ ಐ.ಜಿ.ಪಿ. ರಾಮ್ ಗೋಪಾಲ್ ಗಾರ್ಗ್, ಅಪರಾಧಿಗಳು ನಕಲಿ ಗ್ರಾಹಕರ ಸಂಪರ್ಕ ಸಂಖ್ಯೆ ಮೂಲಕ ವಂಚಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಬ್ಯಾಂಕ್, ವಿಮಾ ಕಂಪನಿ, ಹೋಟೆಲ್ ಹಾಗೂ ಗ್ಯಾಸ್ ಏಜೆನ್ಸಿಗಳ ಹೆಸರಿನಲ್ಲಿ ನಕಲಿ ಸಂಪರ್ಕ ಸಂಖ್ಯೆಗಳನ್ನು ಬಳಸುವ ಮೂಲಕ, ಗೂಗಲ್ ವೇದಿಕೆಯ ದುರ್ಬಳಕೆ ಮಾಡಿಕೊಳ್ಳ ಲಾಗುತ್ತಿದೆ ಎಂದವರು ತಿಳಿಸಿದ್ದಾರೆ.ವಂಚಕರು ಕೆಲವೊಮ್ಮೆ ಗೂಗಲ್ ಜಾಹೀರಾತುಗಳ ಮೂಲಕ ನಕಲಿ ಗ್ರಾಹಕ ಸೇವಾ ಸಂಖ್ಯೆಯನ್ನು ಮೇಲ್ಭಾಗದಲ್ಲಿ ತೋರಿಸುತ್ತಿವೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಗ್ರಾಹಕರು ನಕಲಿ ಸಂಖ್ಯೆಗಳನ್ನೇ ಅಸಲಿ ಎಂದು ಭಾವಿಸಿ ವಂಚಕರ ಬಲೆಗೆ ಬೀಳುತ್ತಿದ್ದಾರೆ. ತಮ್ಮ ಸೂಕ್ಷ್ಮ ಗೌಪ್ಯ ಮಾಹಿತಿ ಯನ್ನು ಹಂಚಿಕೊಳ್ಳುತ್ತಿದ್ದಾರೆ ಎಂದು ಐ.ಜಿ.ಪಿ. ತಿಳಿಸಿದ್ದಾರೆ. ಇಂತಹ ವಂಚನೆಯಿಂದ ಗ್ರಾಹಕರನ್ನು ರಕ್ಷಿಸಬೇಕಿದೆ. ಇದಕ್ಕಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದವರು ಆಗ್ರಹಿಸಿದ್ದಾರೆ.

# ಸಾಂಸ್ಕೃತಿಕ ನಾಯಕ ಬಸವಣ್ಣನಿಗೆ ಶ್ರೇಯಸ್ಸು ಲಭಿಸಲಿ

### ರಾಜಕೀಯ ನಾಯಕರು ಸಮಾಜದ ಸುಖ-ದುಃಖಕ್ಕೆ ಸ್ಪಂದಿಸಿ ; ಪಂಡಿತಾರಾಧ್ಯ ಶ್ರೀಗಳು



ಸಾಣೇಹಳ್ಳಿ, ಮೇ 16- ರಾಜಕೀಯ ನಾಯಕರು ಹಾಗೂ ಮಠದ ಸ್ವಾಮಿಗಳು ಸಮಾಜದ ಸುಖ-ದುಃಖಗಳಲ್ಲಿ ಭಾಗಿಯಾದರೆ ಮಾತ್ರ ಸಾಂಸ್ಕೃತಿಕ ನಾಯಕ ಬಸವಣ್ಣನಿಗೆ ಶ್ರೇಯಸ್ಸು ಲಭಿಸಲಿದೆ ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು ಹೇಳಿದರು.

ಇಲ್ಲಿನ ಎಸ್.ಎಸ್ ರಂಗಮಂದಿರದಲ್ಲಿ ಇತ್ತೀಚೆಗೆ ನಡೆದ 'ಕಾಯಕ ದಿನಾಚರಣೆ ಮತ್ತು 'ವಚನ ಸಂವಿಧಾನ' ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಇಂದಿನ ದಿನಮಾನಗಳಲ್ಲಿ ಧಾರ್ಮಿಕ, ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಆಚಾರ ಕಡಿಮೆಯಾಗಿ ಅನಾಚಾರ ಜಾಸ್ತಿಯಾಗುತ್ತಿದೆ. ಆದ್ದರಿಂದ ನಾವೇ ಬದಲಾಗುವ ಮೂಲಕ ಅಂತರಾವಲೋಕನ ಮಾಡಿಕೊಂಡಾಗ ಮಾತ್ರ ಸಾಮಾಜಿಕ ಬದಲಾವಣೆ ಸಾಧ್ಯ ಎಂದರು.

ಸಮಾಜದಲ್ಲಿ ಅನೇಕ ಒಕ್ಕೂಟಗಳಿದ್ದು, ಇವೆಲ್ಲವೂ ಬಸವ ಪ್ರಜ್ಞೆಯಿಂದ ಕಾರ್ಯ ನಿರ್ವಹಿಸಿದರೆ ಎಲ್ಲ ಒಕ್ಕೂಟಗಳಿಗೆ ಅರ್ಥ ಬರುತ್ತದೆ ಮತ್ತು ಸರಕಾರವು ಬಸವ ತತ್ವಗಳನ್ನು ಸಮಾಜದಲ್ಲಿ ಹರಡಿಸಬೇಕು ಎಂದು ಆಶಿಸಿದರು.

ಗ್ರಂಥ ಬಿಡುಗಡೆಗೊಳಿಸಿ ಮಾತನಾಡಿದ ತೋಂಟದಾರ್ಯ ಸಿದ್ಧರಾಮ ಶ್ರೀಗಳು, ವಚನ ಸಾಹಿತ್ಯದಲ್ಲಿ ಸಂವಿಧಾನದ ಆಶಯಗಳನ್ನು ಕಾಣಬಹುದು ಮತ್ತು ಬಸವಣ್ಣನವರು 12ನೇ ಶತಮಾನದಲ್ಲಿಯೇ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿದಿದ್ದರು ಎಂದು ಹೆಮ್ಮೆಪಟ್ಟರು.

ಬಸವಾದಿ ಶರಣರು ಶ್ರಮ ಸಂಸ್ಕೃತಿಯನ್ನು ಎತ್ತಿ ಹಿಡಿದು ಸರ್ವರಿಗೂ ಗೌರವ ಭಾವನೆ ಹೇಳಿಕೊಟ್ಟಿದ್ದರು. ಆದ್ದರಿಂದ ಇಂದಿನ ಪ್ರತಿ ರಾಜಕೀಯ ನಾಯಕರು 'ವಚನ ಸಂವಿಧಾನ ಗ್ರಂಥ' ಓದಲೇ ಬೇಕು ಎಂದು ಆಶಯ ಪಟ್ಟರು.

ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಶ್ರೀಗಳು ಮಾತನಾಡಿ, ಸಮಾಜದಲ್ಲಿ ಅಸಮಾನತೆಯನ್ನು ಹೊಡೆದೋಡಿಸುವ ಬಗ್ಗೆ ಗಮನಹರಿಸಬೇಕಿದೆ ಜತೆಗೆ ಧರ್ಮದ ನಡೆಗಳು ನುಡಿಗಳಿಗೆ ಸೀಮಿತವಾಗದೇ ನಡೆಯಲ್ಲಿರಬೇಕು ಎಂದ ಅವರು, ವಚನ ಸಾಹಿತ್ಯದ ಮೂಲಕ ಬದುಕು ಹಸನಗೊಳಿಸಿಕೊಳ್ಳಲು ಸಲಹೆ ನೀಡಿದರು.

ಶರಶ್ಚಂದ್ರ ಶ್ರೀಗಳು ಮಾತನಾಡಿ, ಶರಣ ಧರ್ಮದಲ್ಲಿ ಸಮಗ್ರ ಬದುಕಿನ ಬಗ್ಗೆ ಚಿಂತನೆ ಮಾಡುವುದು ಕಾಣಬಹುದು. ಬಸವಣ್ಣನವರು ಎಲ್ಲ ಆಯಾಮಗಳಿಂದ ಸಮಾಜ ಸುಧಾರಣೆಗೆ ಪ್ರಯತ್ನಿಸಿದ್ದಾರೆ. ಇದೆಲ್ಲವನ್ನು ಗಮನಿಸಿದರೆ ಮೊದಲು ಸಂವಿಧಾನ ಕೊಟ್ಟವರೇ ಶರಣರು ಎನ್ನಬಹುದು ಎಂದರು.


ಲೇಖಕ ಎಚ್. ಬಿಲ್ಲಪ್ಪ ಮಾತನಾಡಿ, ಜೀವನದ ನಡಾವಳಿಯಲ್ಲಿ ಮನುಷ್ಯನ ಬದಲಾವಣೆ ನಶಿಸಿದೆ. ಮನುಷ್ಯ ಜನ್ಮ ಉನ್ನತಿಯಾಗಲು ವಚನ ಸಾಹಿತ್ಯದ ಕೃತಿ ಓದಬೇಕು. ಈ ನಿಟ್ಟಿನಲ್ಲಿ ನಮ್ಮ ಆಲೋಚನೆ ಬದಲಿಸಿಕೊಂಡರೆ ಮಾತ್ರ ನಮ್ಮ ಬದುಕು ಬದಲಾಯಾಗಲು ಸಾಧ್ಯ ಎಂದರು.

ಗ್ರಂಥದ ಬಗ್ಗೆ ಗುರುಪಾದಪ್ಪ ಮರಿಗುದ್ದಿ, ಚಂದ್ರಶೇಖರ ತಾಳ್ಯ, ಶಿವನಕೆರೆ ಬಸವಲಿಂಗಪ್ಪ ಮಾತನಾಡಿದರು.

ಚೆನ್ನಬಸವ ಸ್ವಾಮಿಗಳು ಮೋಟಗಿ ಮಠ ಅಥಣಿ ಸ್ವಾಗತಿಸಿದರು. ಎಚ್. ಎಸ್ ದ್ಯಾಮೇಶ್ ನಿರೂಪಿಸಿದರು. ರಾಜು ವಂದಿಸಿದರು.

ಈ ವೇಳೆ ಪುರುಷೋತ್ತಮಾನಂದಪುರಿ ಶ್ರೀಗಳು, ಶಾಂತವೀರ ಶ್ರೀಗಳು, ಈಶ್ವರಾನಂದಪುರಿ ಶ್ರೀಗಳು, ಮಾದಾರ ಚೆನ್ನಯ್ಯ ಶ್ರೀಗಳು, ದಾನೇಶ್ವರಿ ಮಾತಾಜಿ, ಬಸವರತ್ನ ಮಾತಾಜಿ, ರುದ್ರಮುನಿ ಸ್ವಾಮೀಜಿ, ಜ್ಞಾನಪ್ರಭು ಸಿದ್ಧರಾಮ ದೇಶೀಕೇಂದ್ರ ಶ್ರೀಗಳು, ಜಯ ಚಂದ್ರಶೇಖರ ಶ್ರೀಗಳು, ಶಿವಾನುಭವ ಚರಮೂರ್ತಿ ಶಿವರುದ್ರ ಶ್ರೀಗಳು, ಗುರುಬಸವದೇವರು, ಚಂದ್ರಶೇಖರ ಸ್ವಾಮೀಜಿ, ಗುರುಮಹಾಂತ ಸ್ವಾಮೀಜಿ, ಅಕ್ಕಮಹಾದೇವಿ ಮಾತಾಜಿ, ಗಂಗಾದೇವಿ ಮಾತಾಜಿ, ನಿಜಲಿಂಗ ದೇವರು ನಿಡಸೋಸಿ, ಗುರುಬಸವಪಟ್ಟದ್ದೇವರು, ಗುರುಮಹಾಂತ ಶ್ರೀಗಳು, ಬಸವರಾಜ ಪಟ್ಟದಾರ್ಯ ಶ್ರೀಗಳು, ಬಸವಪ್ರಕಾಶ ಶ್ರೀಗಳು, ಬಸವ ಮಹಾಂತ ಶ್ರೀಗಳು, ಬಸವ ಮಹಾಲಿಂಗ ಶ್ರೀಗಳು, ಬಸವ ಮರುಳಸಿದ್ಧ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮೀಜಿ, ಜಯಮೃತ್ಯುಂಜಯ ಶ್ರೀಗಳು, ಅಭಿನವ ಚೆನ್ನಬಸವ ಶ್ರೀಗಳು, ಗುರುಲಿಂಗ ಸ್ವಾಮೀಜಿ, ಇಮ್ಮಡಿ ಮಹಾಂತ ಸ್ವಾಮೀಜಿ, ಶರಣ ಬಸವದೇವರು, ಇಮ್ಮಡಿ ಸಿದ್ಧರಾಮೇಶ್ವರ ಶ್ರೀಗಳು ಸೇರಿದಂತೆ ಹಲವು ಶ್ರೀಗಳು ಇದ್ದರು.

# ಬೆಳೆ ಪರಿಹಾರದ ಹಣ ಸಾಲಕ್ಕೆ ಜಮಾ ಮಾಡದೆ ರೈತರ ಖಾತೆಗೆ ಜಮಾ ಮಾಡಲು ಶಾಸಕರ ಸೂಚನೆ



ರಾಣೇಬೆನ್ನೂರು, ಮೇ 16 - ರೈತರಿಗೆ ನೀಡಲಾಗುತ್ತಿರುವ ಬೆಳೆ ಪರಿಹಾರ ವಿಮಾ ಹಣವನ್ನು ಅವರ ಸಾಲದ ಕಂತುಗಳಿಗೆ ಜಮಾ ಮಾಡಿಕೊಳ್ಳದೆ, ಅವರ ಖಾತೆಗಳಿಗೆ ಜಮಾ ಮಾಡುವಂತೆ ಸರ್ಕಾರ ಆದೇಶ ಮಾಡಿದ್ದು, ಬ್ಯಾಂಕ್ ನವರಿಗೆ ಕಟ್ಟುನಿಟ್ಟಿನ ತಿಳುವಳಿಕೆ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ತಿಳಿದಿದ್ದಾರೆ. ಕಳೆದ ಎರಡು ವರ್ಷಗಳಿಂದ ಪ್ರಕೃತಿ ವಿಕೋಪದಿಂದಾಗಿ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದು ಈಗ ಸರ್ಕಾರ ಕೊಡುವ ಹಣದಿಂದ ಈ ಬಾರಿಯಾ ಮುಂಗಾರು ಬಿತ್ತನೆಗೆ ಬೀಜ ಗೊಬ್ಬರಗಳ ಖರೀದಿಗೆ ಬಹಳಷ್ಟು ಸಹಕಾರಿಯಾಗಲಿದೆ, ಕಾರಣ ಬ್ಯಾಂಕಿನವರು ರೈತರ ಸಾಲ ವಸೂಲಿಗೆ ಆದ್ಯತೆ ಕೊಡದೆ ಅವರ ಖಾತೆಗಳಿಗೆ ಹಣ ಜಮಾ ಮಾಡಿ ಅವರ ಬದುಕಿಗೆ ಸಹಕಾರಿಗಳಾಗಬೇಕು ಎಂದು ಶಾಸಕರು ತಿಳಿಸಿದ್ದಾರೆ.

# ವಚನ ಸಾಹಿತ್ಯ ಜೀವನ ಮೌಲ್ಯಗಳ ಭಂಡಾರ



ಶಿವಗೋಷ್ಠಿಯಲ್ಲಿ ಹೆಚ್.ಕೆ. ಲಿಂಗರಾಜ್

ದಾವಣಗೆರೆ, ಮೇ 16- 12ನೇಯ ಶತಮಾನದ ವಚನ ಸಾಹಿತ್ಯ ಜೀವನ ಮೌಲ್ಯಗಳ ಭಂಡಾರವಾಗಿದೆ. ವಚನಕಾರರು ಸಾರಿದ ಕಾಯಕ ಮತ್ತು ದಾಸೋಹ ನಮ್ಮ ನೆಲದ ಸರ್ವ ಶ್ರೇಷ್ಠ ಜೀವನ ಮೌಲ್ಯವಾಗಿದೆ ಎಂದು ಎಚ್.ಕೆ ಲಿಂಗರಾಜ್ ಅಭಿಪ್ರಾಯ ಪಟ್ಟರು.

ಅನುಭವ ಮಂಟಪದಲ್ಲಿ ಚರ್ಚೆಯಾದ ಜೀವನ ಮೌಲ್ಯಗಳನ್ನು, ನಮ್ಮ ದೇಶದ ಸಂವಿಧಾನದಲ್ಲಿ ಅಳವಡಿಸ ಲಾಗಿದೆ. ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣ 84 ಮೌಲ್ಯಗಳನ್ನು ಅಳವಡಿಸಲಾಗಿದ್ದು, ಸ್ವಾವಲಂಬಿಯಾಗಿ ಬದುಕಲು, ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಇವು ಪೂರಕವಾಗಿವೆ. ನಿತ್ಯ ಜೀವನದ ಜಡತ್ವದಿಂದ ಹೊರಬರಲು ಶಿವಗೋಷ್ಠಿ ಪ್ರೇರಕವಾಗಲಿ ಎಂದು ಲಿಂಗರಾಜ ಆಶಯ ವ್ಯಕ್ತಪಡಿಸಿದರು.

ನಗರದ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರ ಸ್ವಾಮಿ ಮಹಾ ಮಂಟಪದ ಆವರಣದಲ್ಲಿ ಶಿವಗೋಷ್ಠಿ ಸಮಿತಿ ಮತ್ತು ಸಾದರ ನೌಕರರ ಬಳಗಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ 305ನೇಯ ಶಿವಗೋಷ್ಠಿ ಮತ್ತು 79ನೇಯ ಸ್ಮರಣೆ ಕಾರ್ಯಕ್ರಮದಲ್ಲಿ 'ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ. ನಾಗನಗೌಡ ಮರಿಗೌಡರು ಲಿಂಗೈಕ್ಯ ಪ್ರೊ. ಇಂದುಮತಿ ಪಾಟೀಲ್ ಅವರ ಸ್ಮರಣೆ ಮಾಡಿದರು.

ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಮಾಗನೂರು ಸಂಗಮೇಶ ಗೌಡರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ದಾಸೋಹಿ ಪ್ರೊ. ಶಂಕರ ಜಿ. ಅಕ್ಕಿಹಾಳ, ನೌಕರರ ಬಳಗದ ಅಧ್ಯಕ್ಷ ನಾಗಪ್ಪ ಕ್ಯಾರಕಟ್ಟೆ, ನಾಗರಾಜ ಸಿರಿಗೆರೆ ಮುಂತಾದವರು ಉಪಸ್ಥಿತರಿದ್ದರು.

ಎಲೆಬೇತೂರು ಕೊಂಡಜ್ಜಿ ಬಸಪ್ಪ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಎಂ.ಬಿ. ಪ್ರೇಮ ಸ್ವಾಗತಿಸಿದರು. ಶಿಕ್ಷಕಿ ಅನಿತಾ ವಂದನೆ ಸಲ್ಲಿಸಿದರು. ಡಾ. ಷಣ್ಮುಖಪ್ಪ ಕಾರ್ಯಕ್ರಮ ನಿರೂಪಿಸಿದರು.

## ಹಾರಕನಾಳು ಗ್ರಾಮದ ಮಕ್ಕಳಿಗೆ ಜಂತುಹುಳು ನಿವಾರಣಾ ಮಾತ್ರೆ ವಿತರಣೆ



ಹರಪನಹಳ್ಳಿ, ಮೇ 16 - ತಾಲ್ಲೂಕಿನ ಹಾರಕನಾಳು ಗ್ರಾಮದಲ್ಲಿ 16 ವರ್ಷದ ಒಳಗಿನ ಮಕ್ಕಳಿಗೆ ಜಂತುಹುಳು ನಿವಾರಣಾ ಮಾತ್ರೆಯನ್ನು ವಿತರಿಸಲಾಯಿತು. ಕಳೆದ ಮೇ 13 ರಿಂದ ಆಶಾ ಕಾರ್ಯಕರ್ತೆಯರು ಹಾಗೂ ಪಿಹೆಚ್‌ಐಓ ಆರೋಗ್ಯ ಇಲಾಖೆಯ ಸಿಬ್ಬಂದಿ ಮೇಲ್ವಿಚಾರಕಿ ಸಿ. ಭುವನೇಶ್ವರಿ ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಮಾತ್ರೆಗಳನ್ನು ವಿತರಿಸಲಾಯಿತು.

ಪ್ರತಿ ಆರು ತಿಂಗಳಿಗೊಮ್ಮೆ ಜಂತುಹುಳು ನಿವಾರಣಾ ಮಾತ್ರೆಗಳನ್ನು ನೀಡಲಾಗುವುದು. ಮಕ್ಕಳಲ್ಲಿ ಆರಂಭದಲ್ಲಿಯೇ ರಕ್ತ ಹೀನತೆಯನ್ನು ಗುರುತಿಸುವುದರಿಂದ ದೇಹದ ಬೆಳವಣಿಗೆಯಲ್ಲಿ ಆಗುವ ಕುಂಠಿತ ತೊಂದರೆಗಳನ್ನು ಹಾಗೂ ಇತರೆ ಸಾಮಾನ್ಯ ತೊಂದರೆಗಳನ್ನು ಗುರುತಿಸಿ ಮಗುವಿನ ಬಾಲ್ಯವನ್ನು ಸದೃಢಗೊಳಿಸಲು ಈ ಮಾತ್ರೆಗಳು ಉಪಯುಕ್ತವಾಗಿವೆ ಎಂದು ಮಕ್ಕಳ ಪೋಷಕರಿಗೆ ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯ ಇಲಾಖೆ ಸಿಬ್ಬಂದಿ ಚಂದ್ರಪ್ಪ ಪೋಲಾರ್, ಪವಿತ್ರ, ಕವಿತಾ ಹಾಗೂ ಆಶಾ ಕಾರ್ಯಕರ್ತರು ಇದ್ದರು.

## ಎ.ಆರ್.ಎಂ. ಕಾಲೇಜಿನಲ್ಲಿ ಬಸವ ಜಯಂತಿ



ದಾವಣಗೆರೆ, ಮೇ 16 - ಇಲ್ಲಿನ ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಐಕ್ಯೂಎಸಿ ಘಟಕದ ಸಹಯೋಗದಲ್ಲಿ ಶುಕ್ರವಾರ ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ ಆಚರಿಸಲಾಯಿತು. ಕಾಲೇಜಿನ ಪ್ರಾಚಾರ್ಯ ಎಂ.ಡಿ. ಅಣ್ಣಯ್ಯ, ಡಿ. ಅಂಜಿನಪ್ಪ, ಜಿ. ನಾಗರಾಜು, ಡಾ.ಬಿ.ಸಿ. ರಾಕೇಶ್, ಟಿ.ಎನ್. ಮೌನೇಶ್ವರ, ವಿ. ಬಸವರಾಜ, ಬೋಧಕೇತರರಾದ ಷಣ್ಮುಖಿ, ಪಕ್ಕೀರಪ್ಪ, ಶಂಭುಲಿಂಗ ಕಾಯಕದ, ಅಡವೆಪ್ಪ ಇದ್ದರು.

## ಮುಂಬೈ : ಫಲಕ ಅವಘಡದ ರಕ್ಷಣಾ ಕಾರ್ಯಾಚರಣೆ ಪೂರ್ಣ

ಮುಂಬೈ, ಮೇ 16 - ಇಲ್ಲಿನ ಘಟ್ಕೋಪಾರ್‌ನಲ್ಲಿ ಕಬ್ಬಿಣದ ಪ್ರಚಾರ ಫಲಕ ಪೆಟ್ರೋಲ್ ಪಂಪ್ ಮೇಲೆ ಕುಸಿದ ಅವಘಡದಿಂದ ಮೃತರ ಸಂಖ್ಯೆ 16ಕ್ಕೆ ಏರಿಕೆಯಾಗಿದೆ. ರಕ್ಷಣಾ ಕಾರ್ಯಾಚರಣೆ ಪೂರ್ಣಗೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

120 x 120 ಅಡಿಯ ಬೃಹತ್ ಫಲಕ ಪೆಟ್ರೋಲ್ ಪಂಪ್ ಮೇಲೆ ಬಿದ್ದ ನಂತರ ಸುಮಾರು 66 ಗಂಟೆಗಳ ಕಾಲ ನೆರವು ಕಾರ್ಯಾಚರಣೆ ನಡೆಸಲಾಗಿತ್ತು.

ಗುರುವಾರ ಬೆಳಿಗ್ಗೆ 10.30ಕ್ಕೆ ಕಾರ್ಯಾಚರಣೆ ಪೂರ್ಣಗೊಂಡಿದೆ. ಈ ಅವಘಡದಲ್ಲಿ 75 ಜನ ಗಾಯಗೊಂಡಿದ್ದರು.

ಇಡೀ ಜಾಗವನ್ನು ಸಮಗ್ರ ತಪಾಸಣೆ ಮಾಡಲಾಗಿದೆ. ಅಲ್ಲಿ ಇನ್ನಾರೂ ಸಿಲುಕಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇದೇ ಜಾಗದಲ್ಲಿ ಅಳವಡಿಸಲಾಗಿರುವ ಉಳಿದ ಅಕ್ರಮ ಫಲಕಗಳ ತೆರವಿಗೆ ಕಾರ್ಯಾಚರಣೆಯನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುವುದು ಎಂದೂ ಅವರು ತಿಳಿಸಿದ್ದಾರೆ.

# ನಡೆದಿದ್ದನ್ನು ಪದೇ ಪದೇ ಬರೆಯುವುದಕ್ಕಿಂತ ನಡೆಯಬೇಕಾದುದನ್ನು ಬರೆದು, ಜಾಗೃತಿ ಮೂಡಿಸಿ

**ಪ್ರೊ. ಬಿ.ಕೃಷ್ಣಪ್ಪ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬರಹಗಾರರಿಗೆ ನಾದಬ್ರಹ್ಮ ಹಂಸಲೇಖ ಮನವಿ**

ಮಲೇಬೆನ್ನೂರು, ಮೇ 16 - ಈ ಹಿಂದೆ ನಡೆದಿರುವುದನ್ನೇ ಪದೇ ಪದೇ ಬರೆಯದೇ ಮುಂದೆ ನಡೆಯಬೇಕಾದುದನ್ನು ಪುಸ್ತಕ ರೂಪದಲ್ಲಿ ಜನರಿಗೆ ತಿಳಿಸುವ ಕೆಲಸ ಮಾಡಿ ಎಂದು ಖ್ಯಾತ ಸಂಗೀತ ನಿರ್ದೇಶಕ ಹಾಗೂ ಗೀತ ರಚನೆಕಾರ, ನಾದ ಬ್ರಹ್ಮ ಹಂಸಲೇಖ ಅವರು ಬರಹಗಾರರಿಗೆ, ಸಾಹಿತಿಗಳಿಗೆ ಮನವಿ ಮಾಡಿದರು.

ಹನಗವಾಡಿ ಸಮೀಪ ಇರುವ ಪ್ರೊ. ಬಿ.ಕೃಷ್ಣಪ್ಪ ಸಾಂಸ್ಕೃತಿಕ ಭವನದಲ್ಲಿ ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್ ಮಾನವ ಬಂಧುತ್ವ ವೇದಿಕೆ, ಸಿವಿಜಿ ದಾವಣಗೆರೆ ಹಾಗೂ ಕಾಂತಗಿರಿ ಟ್ರಸ್ಟ್ ಮತ್ತು ಕರ್ನಾಟಕ ದಲಿತ ಸಂಘರ್ಷ ಸಮಿತಿ ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ ಕಳೆದ ವಾರ ಹಮ್ಮಿಕೊಂಡಿದ್ದ ಪ್ರೊ. ಬಿ.ಕೃಷ್ಣಪ್ಪ ಸಂಸ್ಮರಣೆ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಮತ್ತು ವಿಶ್ವ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಜಾ ಪ್ರಭುತ್ವ ಇರುವಂತಹ ದೇಶದಲ್ಲಿ ರಾಜಪ್ರಭುತ್ವ ಇದೆ ಎಂದು ಚಿತ್ರ ನಟ ಹಾಗೂ ಚಿಂತಕ ಪ್ರಕಾಶ್ ರೈ ಅವರು ತಮ್ಮದೇ ಭಾಷೆಯಲ್ಲಿ 'ಮಹಾಪ್ರಭು' ಎಂದು ಕರೆಯುವುದರಲ್ಲಿ ವಾಸ್ತವತೆ ಇದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಹೇಳದೇ ಅವರ ಸರ್ವಾಧಿಕಾರತನವನ್ನು ಪ್ರಸ್ತಾಪಿಸಿ ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕಿದೆ ಎಂದರು.



'ಸಿಎಎ' ಎಂಬ ಪೌರತ್ವ ತಿದ್ದುಪಡಿ ಕಾಯ್ದೆ ದೇಶದ 90 ಕೋಟಿ ಜನರನ್ನು ತೂಗಾಡುವಂತೆ ಮಾಡಲಿದ್ದು, ಅಷ್ಟೇ ಅಲ್ಲ ಜನರನ್ನು ಜೈಲಿನಲ್ಲಿಟ್ಟಂತೆ ಎಂದು ಎಚ್ಚರಿಸಿ ಹಂಸಲೇಖ ಅವರು, ಇಂತಹ ವ್ಯವಸ್ಥಿತ ಸಂಚಿನ ಬಗ್ಗೆ ಜನರನ್ನು ಎಚ್ಚರ ಗೊಳಿಸುವ ಕೆಲಸ ಮಾಡಬೇಕಿದೆ ಎಂದು ಬರಹಗಾರರಿಗೆ ಹೇಳಿದರು.

ಬುದ್ಧ ಹೇಳಿದ ವಾಸ್ತವತೆಯನ್ನು ನಾವು ಮೊದಲು ಅರ್ಥಮಾಡಿಕೊಳ್ಳಬೇಕು. ಡಾ. ಅಂಬೇಡ್ಕರ್, ಪ್ರೊ. ಬಿ.ಕೃಷ್ಣಪ್ಪ ಅವರಂತಹ ಅನೇಕ ಹೋರಾಟಗಾರರು ಮಾಡಿದ ಹೋರಾಟಗಳನ್ನು ನಾವು ಮುಂದುವರಿಸಬೇಕು. ಬಸವಣ್ಣರ ಸುಧಾರಣೆಗಳನ್ನು ಮೈಗೂಡಿಸಿಕೊಂಡು ನಾವು ಹೆಜ್ಜೆ ಇಡಬೇಕೆಂದು ಹಂಸಲೇಖ ಹೇಳಿದರು.

ಸನಾತನ ಇದ್ದರೆ ಇರಲಿ. ಆದರೆ, ನಮಗೆ ಪುರಾತನ ಇದೆ ಎಂದು ಬಸವಣ್ಣನವರೇ ಹೇಳಿದ್ದಾರೆ. ಪುರಾತನಕ್ಕಿಂತ ದೊಡ್ಡದು ಯಾವುದೂ ಇಲ್ಲ. ಪುರಾತನದ ಬಗ್ಗೆ ಇಂದಿನ ಯುವ ಜನಾಂಗಕ್ಕೆ ತಿಳಿಸುವ ಕೆಲಸ ಮಾಡೋಣ. ದೇಶದಲ್ಲಿ ಕ್ರಾಂತಿಕಾರಿ ಹೋರಾಟ ಆಗುವುದಕ್ಕೆ ಮಣ್ಣು ಹದ ಆಗುತ್ತಿರುವುದೇ 'ಸಿಎಎ' ಎಂದರು.

ಹೋರಾಟ ಎಂದರೆ, ಹಸಿವು ಇದ್ದೇ ಇರುತ್ತದೆ. ಹಸಿವಿದ್ದರೂ ಹೋರಾಟ ನಿಲ್ಲಿಸಬಾರದು. ಸರ್ವಾಧಿಕಾರಿಗಳು ಕಾರ್ಮಿಕರ ಮೇಲೆ ಗುಂಡು ಹೊಡೆಯಿರಿ ಎಂದಾಗ ಆದ ಕಾರ್ಮಿಕರ ಹೋರಾಟ, ಬಲಿದಾನದ ಸಂಕೇತವೇ ಕಾರ್ಮಿಕರ ದಿನಾಚರಣೆ ಆಗಿದೆ. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಆ ಪ್ರಕಾರ ಸಮರ್ಪಕವಾಗಿ ಸೌಲಭ್ಯಗಳು ಜಾರಿಯಾಗಿಲ್ಲ ಎಂದು ಹಂಸಲೇಖ ಹೇಳಿದರು.

ಸಾಮಾಜಿಕ ಬದ್ಧತೆ ಹೊಂದಿರುವ ದೇವನೂರು ಮಹಾದೇವ, ನಾಗಮೋಹನ್ ದಾಸ್, ಸತೀಶ್ ಜಾರಕಿಹೊಳಿ ಸೇರಿದಂತೆ ಇಂತಹ ಇನ್ನೂ ಅನೇಕರ ಬಗ್ಗೆ ಯುವ ಜನರಿಗೆ ಪರಿಚಯಿಸಬೇಕಿದೆ ಎಂದು ಹಂಸಲೇಖ ತಿಳಿಸಿದರು.

ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಪ್ರೊ. ಎ.ಬಿ.ರಾಮಚಂದ್ರಪ್ಪ ಮಾತನಾಡಿ, ಈ ದಿನ 5 ಜನ ಹಿರಿಯ ಲೇಖಕರ ಕೃತಿಗಳು ಬಿಡುಗಡೆಯಾಗಿದ್ದು, ಅವೆಲ್ಲವೂ ಸಮಾಜಕ್ಕೆ ಹೋರಾಟಗಳನ್ನು ತಿಳಿಸುತ್ತವೆ. ವಿಶ್ವ ವಿದ್ಯಾಲಯಗಳು ಹೇಳುವ ಪಾಠಕ್ಕಿಂತ ಹಸಿವು, ಹೋರಾಟಗಳ ಪಾಠಗಳೇ ನಮಗೆ ಹೆಚ್ಚು ಕಲಿಸಿದ್ದು, ಅಂಬೇಡ್ಕರ್, ಕೃಷ್ಣಪ್ಪ ಅವರ ಹೋರಾಟಗಳು ನಮ್ಮ ಬದುಕಿನ ಭಾಗವಾಗಬೇಕೆಂದರು.

ಹಿರಿಯ ವೈದ್ಯ ಡಾ. ಸುರೇಶ್ ಹನಗವಾಡಿ ಮಾತನಾಡಿ, ಕರ್ನಾಟಕ ಹಿಮೋಫೊಲೀಯೋ ಸೊಸೈಟಿಯ ಮೂಲಕ ಕುಸುಮ ರೋಗಿಗಳಿಗೆ ಸಂಗೀತ ಲೋಕದ ಎಸ್‌ಪಿಬಿ ಮತ್ತು ಹಂಸಲೇಖ ಅವರ ಕೊಡುಗೆಯನ್ನು ಸ್ಮರಿಸಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ.ವಿ. ಪಾಟೀಲ್, ಪ್ರೊ. ಹೆಚ್.ಎ.ಭಿಕ್ಷಾವರ್ತಿಮಠ ಮಾತನಾಡಿದರು.

ಈ ವೇಳೆ ಸಾಹಿತಿ ವೇಮಗಲ್ ಸೋಮಶೇಖರ್ ಅವರ 'ದಾಂಡಿಯಾತ್ರೆ' ಮತ್ತು ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರ 'ಮಹಿಳಾ ಚಳುವಳಿಯ ಜನನಿ ಸಾವಿತ್ರಿ ಬಾಪುಲೆ' ಸೇರಿದಂತೆ ಒಟ್ಟು 5 ಕೃತಿಗಳು ಬಿಡುಗಡೆಯಾದವು.

ಕೃತಿಕಾರರಾದ ಪ್ರೊ. ಹೆಚ್.ಲಿಂಗಪ್ಪ, ಡಾ. ಸಣ್ಣರಾಮ, ಡಾ. ಶಿವಲಿಂಗಪ್ಪ ಮೀರಾಸಾಬಿಹಟ್ಟಿ, ಬಿ.ಎಸ್.ರಾಜೇಂದ್ರ ಪ್ರಸಾದ್ ತೇಕಲವಟ್ಟಿ, ವೇಮಗಲ್ ಸೋಮಶೇಖರ್, ಡಾ. ಕೆರೆಯಾಗಲಹಳ್ಳಿ ತಿಪ್ಪೇಸ್ವಾಮಿ ಮಾತನಾಡಿದರು.

ಶ್ರೀಮತಿ ಇಂದಿರಾ ಕೃಷ್ಣಪ್ಪ ಅಧ್ಯಕ್ಷತೆ ವಹಿಸಿದ್ದರು. ಡಿಎಸ್‌ಎಸ್ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಚಿತ್ರ ಕಲಾವಿದ ಸಿ.ಚಂದ್ರಶೇಖರ್, ಹನಗವಾಡಿಯ ಡಿ. ಕುಮಾರ್, ಸಿ.ತಿಪ್ಪಣ್ಣ, ಮಾಡಾಳ್ ಶಿವಕುಮಾರ್, ಉಕ್ಕಡಗಾತ್ರಿ ಮಂಜು, ಕೊಮಾರನಹಳ್ಳಿಯ ಜಿ.ಮಂಜುನಾಥ್ ಪಟೇಲ್, ಕುಂಬಳೂರು ವಾಸು ಸೇರಿದಂತೆ ಅನೇಕರು ಭಾಗವಹಿಸಿದ್ದರು.

ರುದ್ರಪ್ಪ ಹನಗವಾಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಕೀಲ ದೊಡ್ಡಮನಿ ಮಂಜುನಾಥ್ ಸ್ವಾಗತಿಸಿದರು. ಬನಹಟ್ಟಿಯ ಪೊಲೀಸ್ ಪಾಟೀಲ್ ಮತ್ತು ತಂಡದವರು ಲಾವಣಿ ಪದಗಳನ್ನು ಹಾಡಿ ಗಮನ ಸೆಳೆದರು.

# ಸೌರ ಮಾರುತ: ಪ್ರಭೆ ಸುಂದರ, ಪರಿಣಾಮ ಗಂಭೀರ

(1ನೇ ಪುಟದಿಂದ) ಎಲೆಕ್ಟ್ರಾನಿಕ್ಸ್‌ಗಳ ಮೇಲೆ ಪರಿಣಾಮ ಬೀರುತ್ತವೆ. ಸಿ.ಎಂ.ಇ.ಗಳಿಂದ ಸ್ಪೇಸ್ ಎಕ್ಸ್‌ನ ಸ್ಟಾರ್‌ಲಿಂಕ್ ಅಂತರ್ಜಾಲ ಉಪಗ್ರಹಗಳ ಮೇಲೆ ಅಪಾರ ಒತ್ತಡ ಬಿದ್ದಿದೆ ಎಂದು ಕಂಪನಿಯ ಇಲಾನ್ ಮಸ್ಕ್ ಹೇಳಿದ್ದರು.

ಸಿ.ಎಂ.ಇ.ಗಳು ಉನ್ನತ ತರಾಂಗಂತರದ ರೇಡಿಯೋ ಸಂಪರ್ಕದ ಮೇಲೂ ಪರಿಣಾಮ ಬೀರುತ್ತವೆ. ದೂರ ಪ್ರಯಾಣದ ವಿಮಾನಗಳು ಇಂತಹ ತರಂಗಾಂತರ ಬಳಸುತ್ತವೆ.

ದಿಕ್ಸೂಚಿ ವ್ಯವಸ್ಥೆಯಾದ ಜಿ.ಪಿ.ಎಸ್. ಮೇಲೂ ಸೌರ ಮಾರುತಗಳಿಂದ ಪರಿಣಾಮವಾಗುತ್ತಿದೆ. ಕೆಲ ಜಿ.ಪಿ.ಎಸ್. ವ್ಯವಸ್ಥೆಗಳು ನಿಖರ ಸ್ಥಳ ಗುರುತಿಸಲು ಪರದಾಡುತ್ತಿವೆ. ಅಮೆರಿಕದ ಹಲವಾರು ಕೃಷಿ ಟ್ರ್ಯಾಕ್ಟರ್‌ಗಳು ಜಿಪಿಎಸ್ ಆಧರಿಸಿ ಕಾರ್ಯ ನಿರ್ವಹಿಸುತ್ತಿವೆ. ಇದರಿಂದಾಗಿ ಕೃಷಿಯ ಮೇಲೂ ಪರಿಣಾಮವಾಗಿದೆ ಎಂದು ಅಮೆರಿಕದ ಎನ್.ಒ.ಎ.ಎ. ಸಂಸ್ಥೆಯ ಸೇವಾ ಸಂಚಾಲಕ ಶಾನ್ ಡಾಹ್ಲ್ ಹೇಳಿದ್ದಾರೆ. ಆದರೆ, ಸೌರ ಮಾರುತಗಳನ್ನು ಎದುರಿಸಲು ತಾಂತ್ರಿಕ ವ್ಯವಸ್ಥೆಯನ್ನು ಸಜ್ಜಾಗಿರಿಸಲಾಗುತ್ತಿದೆ. ಹೀಗಾಗಿ ವಿಶ್ವದಾದ್ಯಂತ ಸೌರ ಮಾರುತಗಳಿಂದ ಹೆಚ್ಚು ಪರಿಣಾಮವಾದ ವರದಿಗಳು ಬಂದಿಲ್ಲ.

2024ರ ಮೇ ತಿಂಗಳಲ್ಲಿ ಅಪ್ಪಳಿಸಿರುವ ಸೌರ ಮಾರುತಗಳ ಬಗ್ಗೆ ವಿಜ್ಞಾನಿಗಳು ಇನ್ನೂ ಕೆಲ ವರ್ಷ ಕಾಲ ಅಧ್ಯಯನ ನಡೆಸಲಿದ್ದಾರೆ. ಒಟ್ಟಾರೆ ಹಾನಿಯ ಬಗ್ಗೆ ಇನ್ನೂ ಲೆಕ್ಕ ಹಾಕಲಾಗುತ್ತಿದೆ. ಇದುವರೆಗೂ ದೊರೆತಿರುವ ಮಾಹಿತಿಯ ಪ್ರಕಾರ, 2003ರ ಅಕ್ಟೋಬರ್ ನಂತರ ಇದೇ ಮೊದಲ ಬಾರಿಗೆ ಇಷ್ಟು ಪ್ರಬಲ ಸೌರ ಪ್ರವಾಹ ಕಂಡು ಬಂದಿದೆ.

ಸೌರ ಮಾರುತಗಳಿಂದ ಆಗುವ ಪರಿಣಾಮಗಳ ಬಗ್ಗೆ ವಿಸ್ತೃತವಾದ ಅಧ್ಯಯನ ನಡೆಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ತಾಂತ್ರಿಕ ವ್ಯವಸ್ಥೆಗಳನ್ನು ರಕ್ಷಿಸಲು ಇನ್ನಷ್ಟು ಕ್ರಮ ತೆಗೆದುಕೊಳ್ಳಲಾಗುವುದು.

ಇಷ್ಟಾದರೂ, ಈಗ ಕಂಡು ಬಂದಿರುವ ಸೌರ ಮಾರುತ ಇತಿಹಾಸದಲ್ಲಿ ಅತ್ಯಂತ ಪ್ರಬಲವೇನೂ ಅಲ್ಲ. 1859ರ ಸೆಪ್ಟೆಂಬರ್‌ನಲ್ಲಿ ಕಂಡು ಬಂದ ಕ್ಯಾರಿಂಗ್ಟನ್ ಇವೆಂಟ್ ಎಂಬ ಹೆಸರಿನ ಮಾರುತ ಅತ್ಯಂತ ತೀವ್ರ ಸ್ವರೂಪದ್ದು ಎಂದು ಗುರುತಿಸಲಾಗಿದೆ.

ಆ ಸಂದರ್ಭದಲ್ಲಿ ದಕ್ಷಿಣ ಕೆರೆಬಿಯನ್‌ನಷ್ಟು ದೂರದಲ್ಲೂ ಧ್ರುವ ಪ್ರಭೆ ಕಾಣಿಸಿಕೊಂಡಿತ್ತು. ಆಗಿನ ಟೆಲಿಗ್ರಾಫ್‌ನ ತಾಮ್ರ ತಂತಿಗಳಲ್ಲಿ ಶಕ್ತಿಶಾಲಿ ತರಂಗ ಹರಿದು ಒಬ್ಬ ಆಪರೇಟರ್‌ಗೆ ಆಘಾತವೂ ಆಗಿತ್ತು.

ಮೇ ತಿಂಗಳಲ್ಲಿ ಉಂಟಾದ ಸೌರ ಪ್ರವಾಹಕ್ಕಿಂತ, ಕ್ಯಾರಿಂಗ್ಟನ್ ಪ್ರವಾಹ ಮೂರು ಪಟ್ಟು ಹೆಚ್ಚು ತೀವ್ರವಾಗಿತ್ತು ಎಂದು ಅಂದಾಜಿಸಲಾಗಿದೆ. ಇಂತಹ ಪ್ರವಾಹಗಳು ತೀರಾ ಅಪರೂಪ. ಅಂತಹ ಪ್ರವಾಹಗಳು ಶತಮಾನದಲ್ಲೊಮ್ಮೆ ಸಂಭವಿಸಬಹುದು. ಮೇ ತಿಂಗಳಲ್ಲಿ ಸಂಭವಿಸಿದ ಪ್ರವಾಹಗಳು ಒಂದೆರಡು ದಶಕಗಳಿಗೆ ಒಮ್ಮೆ ಕಂಡು ಬರುತ್ತವೆ.

ಬಾಹ್ಯಾಕಾಶ ವಾತಾವರಣವನ್ನು ಹೆಚ್ಚು ಅರ್ಥ ಮಾಡಿಕೊಂಡು ಮುಂಬರುವ ವಿಕೋಪಗಳನ್ನು ಎದುರಿಸುವತ್ತ ಈಗ ಹೆಚ್ಚಿನ ಸಂಶೋಧನೆಗಳು ನಡೆಯುತ್ತಿವೆ. ಇದರಿಂದ ತಂತ್ರಜ್ಞಾನ ಮುಂಬರುವ ದಿನಗಳಲ್ಲಿ ಇನ್ನಷ್ಟು ಸಶಕ್ತವಾಗುವ ನಿರೀಕ್ಷೆ ಇದೆ.

## ಮೊರಾರ್ಜಿ ದೇಸಾಯಿ ಕಾಲೇಜುಗಳಲ್ಲಿ ಪಿಯುಸಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 16- ಮೊರಾರ್ಜಿ ದೇಸಾಯಿ, ಏಕಲವ್ಯ ಮಾದರಿ ವಸತಿ ಪದವಿ ಪೂರ್ವ ವಿಜ್ಞಾನ ವಸತಿ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ಪಿ.ಸಿ.ಎಂ.ಬಿ ಮತ್ತು ಪಿ.ಸಿ.ಎಂ.ಸಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಲಾಗಿದೆ.

ಪ್ರವೇಶಕ್ಕೆ ಎಲ್ಲಾ ಮೊರಾರ್ಜಿ ಶಾಲಾ ಮತ್ತು ಕಾಲೇಜುಗಳಲ್ಲಿ ಖುದ್ದಾಗಿ ಅರ್ಜಿ ಪಡೆದು ಇದೇ ದಿನಾಂಖ 20 ರೊಳಗಾಗಿ ಎಲ್ಲಾ ಮೊರಾರ್ಜಿ ಶಾಲಾ ಮತ್ತು ಕಾಲೇಜುಗಳಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು ಆವರಗೊಳ್ಳ ಮತ್ತು ಕಾರಿಗನೂರು ಇಲ್ಲಿ ಸಂಪರ್ಕಿಸಬಹುದೆಂದು ಪ್ರಾಂಶುಪಾಲರು ತಿಳಿಸಿದ್ದಾರೆ.

## ಮೊದಲ ನಾಲ್ಕು ಹಂತಗಳಲ್ಲಿ ಶೇ.66.95ರಷ್ಟು ಮತದಾನ

ನವದೆಹಲಿ, ಮೇ 16- ಲೋಕಸಭಾ ಚುನಾವ ಣೆಯ ಮೊದಲ ನಾಲ್ಕು ಹಂತಗಳಲ್ಲಿ ಒಟ್ಟಾರೆ ಶೇ.66.95ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಇದುವರೆಗೆ ನಡೆದ ಮತದಾನದಲ್ಲಿ 97 ಕೋಟಿ ಮತದಾರರ ಪೈಕಿ 45.10 ಕೋಟಿ ಜನರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಮೇ 13ರಂದು ನಡೆದ ನಾಲ್ಕನೇ ಹಂತದ ಚುನಾವಣೆಯಲ್ಲಿ ಶೇ.69.16ರಷ್ಟು ಮತದಾನವಾಗಿದೆ ಎಂದು ಚುನಾವಣಾ ಅಧಿಕಾರಿಗಳು ಹೇಳಿದ್ದಾರೆ. ಇದು 2019ರ ಲೋಕಸಭಾ ಚುನಾವಣೆಗಿಂತ ಶೇ.3.65ರಷ್ಟು ಹೆಚ್ಚಾಗಿದೆ.

ಮೊದಲ ನಾಲ್ಕು ಹಂತಗಳಲ್ಲಿ 23 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 379 ಲೋಕಸಭಾ ಕ್ಷೇತ್ರಗಳಿಗೆ ಮತದಾನವಾಗಿದೆ.

## ಬಸವರಾಜ್ ಗುರೂಜಿಯಿಂದ ವಿಶೇಷ ಅಭಿಷೇಕ



ದಾವಣಗೆರೆ, ಮೇ 16 - ನಗರದ ಶಿವಕುಮಾರಸ್ವಾಮಿ ಬಡಾವಣೆಯ ವೀರಾಂಜನೇಯ ಸ್ವಾಮಿ ಸಾರ್ವಜನಿಕ ಧ್ಯಾನ ಮಂದಿರದಲ್ಲಿ ಶನಿವಾರ ಹನುಮಾವತಾರಿ ಬಸವರಾಜ ಗುರೂಜಿ ಅವರು ವೀರಭದ್ರೇಶ್ವರ ಸ್ವಾಮಿ, ಆಂಜನೇಯ ಸ್ವಾಮಿ, ಓಂಕಾರ ಗಣಪತಿ, ಸುಬ್ರಹ್ಮಣ್ಯಸ್ವಾಮಿ, ವರಾಹ ಭೀಮಾಶಂಕರ ಲಿಂಗುವಿಗೆ ವಿಶೇಷ ಗಂಗಾ ಜಲಾಭಿಷೇಕ, ಕ್ಷೀರಾಭಿಷೇಕ, ಪಂಚಾಮೃತ ಅಭಿಷೇಕವನ್ನು ನೆರವೇರಿಸಿದರು.

ಎಸ್. ನಿರ್ಮಲಮ್ಮ ಮುರುಗೇಶಪ್ಪ, ಎಸ್. ಮಾಲಾ, ಚಂದ್ರಶೇಖರ್, ಎಂ. ಸ್ನೇಹಾ ಮತ್ತು ಜಿ.ವಿ. ಅನೂಪ್ ಅವರಿಗೆ ಪೂಜ್ಯರು ಸನ್ಮಾನಿಸಿದರು.

ಎಸ್. ಶಿವಬಸಮ್ಮ, ಡಿ.ಎಸ್. ಭರತ್, ಪ್ರಕಾಶ್ ಹೊಸಮನಿ, ಸಂಗಪ್ಪ ತೋಟದ್, ಬಿ. ಗೀತಾ, ಎಂ. ಉದಯಕುಮಾರ್, ಬಿ. ಸಂತೋಷ ಕುಮಾರ್, ಬಿ. ಮಂಜಮ್ಮ, ಡಿ.ಪಿ. ಚೇತನ್ ಕುಮಾರ್ ಸೇರಿದಂತೆ ಇತ್ತಿತರಿರದ್ದರು.

## ನಗರದಲ್ಲಿ ಇಂದು ಡೆಂಗ್ಯೂ ಜಾಗೃತಿ ಜಾಥಾ

ಡೆಂಗ್ಯೂ ನಿಯಂತ್ರಣ ಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಇಂದು ಬೆಳಿಗ್ಗೆ 9 ಗಂಟೆಗೆ ನಗರದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಆವರಣದಿಂದ ಜಾಗೃತಿ ಜಾಥಾ ಆಯೋಜಿಸಲಾಗಿದೆ. ಜಿಪಂ ಸಿಇಓ ಸುರೇಶ್ ಬಿ.ಇಟ್ನಾಳ್ ಜಾಥಾಕ್ಕೆ ಚಾಲನೆ ನೀಡುವರು. ಚಾಮರಾಜ ಪೇಟೆ ಸರ್ಕಲ್‌ನಿಂದ ಆರಂಭವಾಗುವ ಜಾಥಾ ಭಾಷಾನಗರದ ಆರೋಗ್ಯ ಕೇಂದ್ರದವರೆಗೂ ಸಂಚರಿಸಿ ಮುಕ್ತಾಯಗೊಳ್ಳಲಿದೆ.


**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸಲ್ ಕಟ್ಟಲು ಹಾಗೂ ಇಡ್ಲಿ ವಡ (ಅನುಭವ ಉಳ್ಳವರು) ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ :
97435 36352

**ಬಾಡಿಗೆಗೆ**
ವಿಶಾಲವಾದ ಡ್ಯೂಪ್ಲೆಕ್ಸ್ 3 ಬೆಡ್ ರೂಂ, ಅಟ್ಯಾಚ್ಡ್ ಬಾತ್ ರೂಂ, ಕಾರ್ ಪಾರ್ಕಿಂಗ್ ಮತ್ತು ಬೋರ್‌ವೆಲ್ ವ್ಯವಸ್ಥೆ ಇರುವ ಮನೆ ಎಸ್.ಎಸ್. ಬಡಾವಣೆ ಬಿ ಬ್ಲಾಕ್, 4ನೇ ಮೇನ್, ದಾವಣಗೆರೆ ಇಲ್ಲಿ ಬಾಡಿಗೆಗೆ ಇದೆ.
96633 93916

**FLAT FOR LEASE**
2 BHK, North Facing 1325 sqft. address : AM Apartment, Nainika Prime Rose, Vidyanagar City Bus last stop. Davangere.
8951938228

**Property Hub**
- EC
- E-swathu
- Building Licence
- Khatha Change
96118 66449

**ಕೆಲಸಕ್ಕೆ ಬೇಕಾಗಿದ್ದಾರೆ**
25 ರಿಂದ 35 ವರ್ಷದೊಳಗಿನ ಪುರುಷ ಅಭ್ಯರ್ಥಿ ಸಂಜೆ 6 ರಿಂದ ರಾತ್ರಿ 12ರವರೆಗೆ ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
08192 254736

**ಮಳಿಗೆ ಮಾರಾಟಕ್ಕೆ ಇದೆ**
ಡೋ.ನಂ. 80/6, ರೇಣುಕಾ ಮಂದಿರದ ಎದುರು, ಎವಿಕೆ ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, 2ನೇ ಮುಖ್ಯರಸ್ತೆಯಲ್ಲಿ ಗ್ರೌಂಡ್ ಫ್ಲೋರ್ ಹಾಗೂ ಫಸ್ಟ್ ಫ್ಲೋರ್‌ನಲ್ಲಿ ಒಟ್ಟು 650 ಚದುರಡಿ ಇರುವ ಮಳಿಗೆ ಮಾರಾಟಕ್ಕೆ ಇದೆ.
93422 96777

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಬೇಕಾಗಿದ್ದಾರೆ**
ಹಾಸ್ಪಿಟಲ್‌ನಲ್ಲಿ ಇನ್ಶೂರೆನ್ಸ್ ಸ್ಕೀಮ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಸ್ಟಾಫ್ ಬೇಕಾಗಿದ್ದಾರೆ. ಉತ್ತಮ ವೇತನ ನೀಡಲಾಗುವುದು
99725 23910

**ಶಿಕ್ಷಕ/ ಶಿಕ್ಷಕಿಯರು ಬೇಕಾಗಿದ್ದಾರೆ**
ನಿಸರ್ಗ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ
ಎಸ್‌ಓಜಿ ಬಡಾವಣೆ, ದಾವಣಗೆರೆ.
1) D.Ed/ B.Com/B.Sc, B.Ed (Maths for primary ) - 01
2) Computer Tr :-01
ಸಂಪರ್ಕಿಸಿ:
87927 02690, 99862 26454

**ಬೇಕಾಗಿದ್ದಾರೆ**
ಹೋಲ್‌ಸೇಲ್ ಮೆಡಿಕಲ್ ಫಾರ್ಮಾದಲ್ಲಿ ಪಾರ್ಟ್ ಟೈಂ ಅಥವಾ ಫುಲ್ ಟೈಂ ಕೆಲಸ ಮಾಡಲು ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿ ಪಾಸ್ ಅಥವಾ ಫೇಲ್ ಆದ ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಹಾಗೂ ಬೋನಸ್ ಇರುತ್ತದೆ.
98806 59221/ 93410 21860

**ಬೇಕಾಗಿದ್ದಾರೆ**
1) ಆರ್ಡರ್ ಬುಕ್ಕಿಂಗ್ - ಪಿಯುಸಿ
2) ಬಿ.ಕಾಂ ಅಕೌಂಟ್ಸ್ / ಬಿಲ್ಲಿಂಗ್ ಜೊತೆಗೆ ಕಂಪ್ಯೂಟರ್ ಜ್ಞಾನ (ವಿವಾಹಿತ ಮಹಿಳೆಯರಿಗೆ ಆದ್ಯತೆ)
ಸ್ವವಿವರದೊಂದಿಗೆ ಸಂಪರ್ಕಿಸಿ.
ಎ.ಕೆ. ಟ್ರೇಡರ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ.
888 424 0403

**ಬೇಕಾಗಿದ್ದಾರೆ**
ಪರ್ಸನಲ್ ಪರಮೆಂಟ್ ಕಾರ್ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
98453 79555

**ಬಾಡಿಗೆಗೆ ಇದೆ**
ಬನಶಂಕರಿ ಬಡಾವಣೆ, ಸ್ವಾಮಿ ವಿವೇಕಾನಂದ ಶಾಲೆ ಹತ್ತಿರ. ಎ.ಸಿ. ಅಟ್ಯಾಚ್ಡ್ ಬಾತ್ ರೂಮ್ ಹಾಲ್ ಆಫೀಸ್‌ಗೆ ಲಗತ್ತಾಗಿರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
94485 34180

**ಖಾಲಿ ನಿವೇಶನ ಬಾಡಿಗೆಗೆ ಬೇಕಾಗಿದೆ**
ದಾವಣಗೆರೆ ನಗರದ ಎಸ್.ಎಸ್. ಬಡಾವಣೆ, ಬಿ ಬ್ಲಾಕ್‌ನಲ್ಲಿ ರಾಘವೇಂದ್ರ ಕಾಲೇಜಿನ ಸುತ್ತಮುತ್ತ ಖಾಲಿ ನಿವೇಶನ ಬಾಡಿಗೆಗೆ ಬೇಕಾಗಿದೆ.
87224 30279

**ಬೇಕಾಗಿದ್ದಾರೆ**
ದಾವಣಗೆರೆಯ ಶರಭೇಶ್ವರ ಊಟದ ಹೋಟೆಲ್‌ನಲ್ಲಿ ಸರ್ವೀಸ್, ಸೇಲ್ಸ್ ಕೆಲಸ ಮಾಡಲು ಹುಡುಗ/ ಹುಡುಗಿಯರು ಬೇಕಾಗಿದ್ದಾರೆ. (ಪಾರ್ಟ್ ಟೈಮ್) ಉಚಿತ ಊಟ, ವಸತಿ ಸೌಲಭ್ಯದೊಂದಿಗೆ, ಉತ್ತಮ ಸಂಬಳ ಲಭ್ಯವಿದೆ. ಸಂಪರ್ಕಿಸಿ:
94489 80070, 88847 04025

**ಕರ್ನಾಟಕ ಮುಕ್ತ ವಿದ್ಯಾಲಯ (KOS)**
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

**TEACHERS WANTED**
BA, B.Ed or MA English Major
B.Sc. B.Ed or M.Sc. Science Teacher
Anjum Composite High School
Kannada, Urdu & English Medium
Apply or Attend Immediately to above Address
93793 45070, 95381 21919

**ಎಕ್ಸ್‌ಚೇಂಜ್ ಆಫರ್**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಷನ್, ಸೋಳ್ಳೆ ಮೆಷ್, ಸ್ಪಂಜ್ ಬೆಡ್ ಸಿಗುತ್ತದೆ ಹಾಗೂ ರಿಪೇರಿ ಸಹ ಮಾಡುತ್ತೇವೆ.
88164 38237

**WANTED**
A.Order Booking - PUC
B.B.Com Accounts/ Billing with Computer Knowledge (Married Ladies Prefered)
Contact along with Bio Data
AK TRADERS
BAPUJI HOSPITAL ROAD PJ EXTENSION

**WANTED**
Lady Manager, Table work ladies tailor, Shop Incharge, Shop Asst, Lady Stichers, Helpers wanted.
Qualification : 7th Pass/Fail.
98445 81966

**ಮಳಿಗೆಗಳು ಬಾಡಿಗೆಗಿವೆ**
ಮಂಡಿಪೇಟೆಯ ಒಂದೇ ಕಾಂಪ್ಲೆಕ್ಸ್‌ನಲ್ಲಿ ಮೂರು ಮಳಿಗೆಗಳು ಲಭ್ಯವಿದ್ದು, ಬೆಳ್ಳಿ, ಬಂಗಾರ, ಬಟ್ಟೆ ಅಂಗಡಿಗೆ ಸೂಕ್ತವಾದದ್ದು. ಆಸಕ್ತರು ಈ ಕೆಳಗಿನ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ...
ಮಂಡಿಪೇಟೆ, ದಾವಣಗೆರೆ.
96865 51303
99806 29965

**ಬೇಕಾಗಿದ್ದಾರೆ**
ಸಿಲಿಂಡರ್ ಸಪ್ಲೈ ಮಾಡಲು ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ. (ಇಂಡೇನ್, ಹೆಚ್.ಪಿ., ಭಾರತ್ ಏಜೆನ್ಸಿಯಲ್ಲಿ ಅನುಭವವಿರುವವರಿಗೆ ಆದ್ಯತೆ)
ಶಂಕರಲೀಲಾ ಗ್ಯಾಸ್ ಏಜೆನ್ಸಿ, ದಾವಣಗೆರೆ.
99164 54770, 90190 94446

**ಮನೆ/ಆಫೀಸ್ ಬಾಡಿಗೆಗೆ/ಲೀಸ್ ಗೆ ಇದೆ**
1200 ಚದರ.3bhk 1ನೇ ಮಹಡಿ.4ನೇ ಮುಖ್ಯ ರಸ್ತೆ (ಹಳೇ ಪೋಸ್ಟ್ ಆಫೀಸ್ ರಸ್ತೆ), ಅಂಬಾ ಭವಾನಿ ದೇವಸ್ಥಾನದ ಹತ್ತಿರ. ಕಾವೇರಮ್ಮ ಶಾಲೆ ಹಿಂಭಾಗ, ಕೆಬಿ ಬಡಾವಣೆ, ದಾವಣಗೆರೆ. (ಸಸ್ಯಹಾರಿಗಳಿಗೆ ಮಾತ್ರ)
8867476070, 9480176324

**ಬೇಕಾಗಿದ್ದಾರೆ**
ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಕೇಶ್ವರ ಇಂಡಸ್ಟ್ರೀಸ್, ಕರೂರ್ ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ. ಸಂಪರ್ಕಿಸಿ :
73488 57382, 94829 91495

**ಬೇಕಾಗಿದ್ದಾರೆ**
ನಮ್ಮ ಮಾರಾಟ ಮಳಿಗೆಯಲ್ಲಿ ಕೌಂಟರ್ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ.
ANS FOODS
ಮಂಡಿಪೇಟೆ, ದಾವಣಗೆರೆ.
9448272734

**ಶಿಕ್ಷಕಿಯರು ಬೇಕಾಗಿದ್ದಾರೆ**
B.A. B.Ed (Eng) - 2
B.Sc B.Ed - 2
ಮೌಂಟ್ ಎವರೆಸ್ಟ್ ವಿದ್ಯಾಲಯ
ನಿಟುವಳ್ಳಿ, ಜಯನಗರ, ದಾವಣಗೆರೆ
91136 10789, 97439 24203

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**ಮನೆ ಬಾಡಿಗೆಗೆ**
# 187, ಡಿ ಬ್ಲಾಕ್, ನಾಗನೂರು ಮೇನ್ ರೋಡ್, ಜೆ.ಹೆಚ್. ಪಟೇಲ್ ನಗರ, ದಾವಣಗೆರೆಯಲ್ಲಿ ನೂತನವಾಗಿ ನಿರ್ಮಿಸಿರುವ ಮನೆ, ಮುನ್ಸಿಪಲ್/ಬೋರ್ ನೀರಿನ ಸೋಲಾರ್ ವ್ಯವಸ್ಥೆ ಇರುವ 2 BHK ಗ್ರೌಂಡ್ ಫ್ಲೋರ್, 1BHK ಮನೆ ಬಾಡಿಗೆಗಿದೆ.
82967 46293, 99452 15240

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್‌ಗೆ ಬೇಕಾಗಿದ್ದಾರೆ**
ಗಂಡ-ಹೆಂಡತಿ ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 25,000 ರೂ. ಇಬ್ಬರಿಂದ ರೂಂ ಮತ್ತು ಗ್ಯಾಸ್ ಉಚಿತ.
97400 98047

ಶ್ರೀ ಗುರು ಮರುಳಸಿದ್ದೇಶ್ವರ ಸೇವಾ ಸಂಸ್ಥೆ (ರಿ.)
**ಹಿಂದೂ ವಧು ವರರ ಮಾಹಿತಿ ಕೇಂದ್ರ**
www.hindusmatrimony.com
SGM Tours
ನಮ್ಮ ಸಂಸ್ಥೆಯ ದಾವಣಗೆರೆ ಕಛೇರಿಗೆ ಕಂಪ್ಯೂಟರ್ ಅನುಭವವುಳ್ಳ ಮಹಿಳಾ ವ್ಯವಸ್ಥಾಪಕರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ.
78925 10652

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾತಾ ವಿದ್ಯಾಸಂಸ್ಥೆ (ರಿ.). ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ ಪಾರ್ಟ್‌ಟೈಂ ಡ್ರೈವರ್ ಬೇಕಾಗಿದ್ದಾರೆ. ಹಾಗೂ ಶಾಲೆಗೆ ಆಯಾ, ಜವಾನರು ಬೇಕಾಗಿದ್ದಾರೆ. ಸಂಪರ್ಕಿಸಿ :
99640 17729

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ಮಹಿಳೆಯರಿಗೆ ಹೆಚ್ಚಿನ ಆದ್ಯತೆ ಇದೆ, ವಿದ್ಯಾರ್ಹತೆ - PUC & Degree, ಕಂಪ್ಯೂಟರ್ ಅಂಗಡಿಗೆ ನುರಿತ ಮತ್ತು ಹೆಚ್ಚಿನ ಅನುಭವವುಳ್ಳವರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ :
70195 12416, 88676 77031

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
81478 03755

**BUSINESS OPPORTUNITY !**
Looking for Business Partner With Zero Investment
Specially for :
- Mutual fund agent
- Retired Bank employees
- Retired Teachers
- Self employed
- Senior citizens
- Medical Pharma distributor
- Medical Representatives
ENQUIRY
8904270234

**ಪ್ರವೇಶ ಪ್ರಕಟಣೆ 2024-25**
ಹೆಲ್ತ್ ಇನ್ಸ್‌ಪೆಕ್ಟರ್ DHI | ಲ್ಯಾಬ್ ಟೆಕ್ನಾಲಜಿ DMLT
ಇಮೇಜಿಂಗ್ ಟೆಕ್ನಾಲಜಿ X-ray | ಡಿಪ್ಲೊಮೊ ಫಾರ್ಮಸಿ D pharm
ಡಿಪ್ಲೊಮಾ ಆಪರೇಷನ್ ಟೆಕ್ನಾಲಜಿ ಅಂಡ್ ಅನಸ್ತೇಶಿಯಾ ಟೆಕ್ನಾಲಜಿ DOT & AT
ಕೆಲವೇ ಸೀಟುಗಳು ಮಾತ್ರ
ಎಲ್ಲಾ ವಿದ್ಯಾರ್ಥಿಗಳಿಗೂ ಸ್ಕಾಲರ್‌ಶಿಪ್ ಮತ್ತು ಹಾಸ್ಟೆಲ್ ಸೌಲಭ್ಯವಿದೆ.
VS PARAMEDICAL COLLEGE, DAVANAGERE.
9019580600
8861445913

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**TEACHERS WANTED**
Shree Taralabalu Educational Institution (R) Sirigere
Shree Taralabalu Nursery And English Medium Higer Primary School - Basapura
21st Ward, Davanagere -577001
B.Sc, B.Ed - 02, BA, B.Ed - 02 (English Major)
Hindi B.Ed - 01, D.Ed, BA - 02
Contcat : 94488 03836
95912 85527, 81977 96810

**JOB OFFER**
Computer Trainer
Software Skills Computer Basics, Taly & DTP
(Qualification-B.com)
Vertex Education Institute
97385 32254

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಹಣಿಗೆರೆಕಟ್ಟೆ ಜ್ಯೋತಿಷ್ಯ ಫಲಂ**
ಶ್ರೀ ಚೌಡೇಶ್ವರಿ ದೇವಿ ಮತ್ತು ಭೂತರಾಯನ ಪ್ರಯೋಗದಿಂದ ಪೂಜೆ ಸಲ್ಲಿಸಲಾಗುತ್ತದೆ.
ಪಂ|| ಎ.ಕೆ. ರಾವ್
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ.
99644 84508

# ಉತ್ತಮ ಹಾಡುಗಾರರಾಗಲು ನಿತ್ಯ ಕಲಿಕೆ ಮುಖ್ಯ



ದಾವಣಗೆರೆ, ಮೇ 16 - ಗೀತಗಾಯನ ತರಬೇತಿ ಶಿಬಿರದಲ್ಲಿ ಕಲಿತ ಸಾಹಿತ್ಯ ಮತ್ತು ಸಂಗೀತಾಭ್ಯಾಸ ಒಂದೆರಡು ದಿನಕ್ಕೆ ಸೀಮಿತವಾಗದೆ, ನಿತ್ಯವೂ ಸಂಗೀತಾಭ್ಯಾಸ ಮಾಡುತ್ತಾ ಉತ್ತಮ ಹಾಡುಗಾರರಾಗಿ ಎಂದು ನಿವೃತ್ತ ಪ್ರಾಧ್ಯಾಪಕರಾದ ನೀಲಾಂಬಿಕೆ ಹೇಳಿದರು.

ನಗರದ ಆರ್.ಹೆಚ್.ಗೀತಾ ಮಂದಿರದಲ್ಲಿ ಇತ್ತೀಚೆಗೆ ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆ ಮತ್ತು ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಗೀತ ಗಾಯನ ತರಬೇತಿ ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಗೀತ ನಿರ್ದೇಶಕ ಬೆಂಗಳೂರಿನ ಉಪಾಸನಾ ಮೋಹನ್ ಮಾತನಾಡಿ, ಸಂಗೀತ ಸಂಪ್ರದಾಯವು ಜೀವನದ ಅವಿಭಾಜ್ಯ ಅಂಗವಾಗಿದ್ದು, ಸಂಕುಚಿತ ಭಾವನೆ ಬಿಟ್ಟು ವಿಶಾಲ ಮನೋಭಾವ ರೂಢಿಸಿಕೊಳ್ಳುವಂತೆ ಸಲಹೆ ನೀಡಿದರು.

ಅನುಶ್ರೀ ಸಂಗೀತ ಶಾಲೆಯ ಸಂಸ್ಥಾಪಕರಾದ ವೀಣಾ ಸದಾನಂದ ಹೆಗಡೆ ಮಾತನಾಡಿ, ಸಂಗೀತಗಾರರು ರಾಗ, ತಾಳ ಮತ್ತು ರಾಗ ಸಂಯೋಜನೆಗಳ ಪರಿಜ್ಞಾನ ಬೆಳೆಸಿಕೊಂಡರೆ, ಉತ್ತಮ ಹಾಡುಗಾರರಾಗಬಹುದು ಎಂದರು.

ಶಿಬಿರದಲ್ಲಿ ಮಕ್ಕಳ ಮನರಂಜನೆಗಾಗಿ ರಾಮಾಯಣ, ಮಹಾಭಾರತ, ಜಾಣ ಗಣಿತ, ಜಾಣ ಒಗಟು, ದಾವಣಗೆರೆ ಇತಿಹಾಸ ಮತ್ತು ಪರಂಪರೆಯ ಕುರಿತಾದ ಪ್ರಶ್ನೋತ್ತರ, ಆಟೋಟ ಸ್ಪರ್ಧೆಗಳು ನಡೆದವು.

ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರಾದ ಶೋಭಾ ರಂಗನಾಥ್ ಪ್ರಾಸ್ತಾವಿಕ ಮಾತನಾಡಿದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಮಾಲತೇಶ್ ಕುಲಕರ್ಣಿ, ಕಲಾಕುಂಚದ ಹಾವೇರಿ ಜಿಲ್ಲಾಧ್ಯಕ್ಷ ಪರಮೇಶ್ವರಯ್ಯ ವೀರಭದ್ರಯ್ಯ ಮಠದ್, ಜೆ.ಶಿಲ್ಪಾ, ಹಾಲಸ್ವಾಮಿ ಮತ್ತು ಇತರರು ಇದ್ದರು.

# ಕಾಯಕದ ಮಹತ್ವ ಸಾರಿದ ವಿಶ್ವಗುರು ಬಸವಣ್ಣ

## ತಾಲ್ಲೂಕು ಕಸಾಪ ಕಾರ್ಯಕ್ರಮದಲ್ಲಿ ಎಜಿಬಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಉಷಾ

ದಾವಣಗೆರೆ, ಮೇ 16 - ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಪ್ರಜ್ಞಾ ವೇದಿಕೆ ವನಿತಾ ಸಮಾಜ, ವನಿತಾ ಸಾಹಿತ್ಯ ವೇದಿಕೆ, ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ಇವರ ಸಹಯೋಗದಲ್ಲಿ ಬಸವ ಜಯಂತಿ, ತಾಯಂದಿರ ದಿನಾಚರಣೆ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮ ಹಿರಿಯ ವನಿತೆಯರ ಆನಂದಧಾಮದಲ್ಲಿ ನಡೆಯಿತು.



ಪ್ರಜ್ಞಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಜಯಮ್ಮನೀಲಗುಂದ ಅವರು ಅಧ್ಯಕ್ಷತೆ ವಹಿಸಿದ್ದರು. ಆನಂದ ಧಾಮದ ಹಿರಿಯ ವನಿತೆಯರು ಹಾಗೂ ವೇದಿಕೆಯಲ್ಲಿದ್ದ ಅತಿಥಿಗಳು ವಿಶ್ವಗುರು ಬಸವಣ್ಣನವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಎಜಿಬಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀಮತಿ ಉಷಾ ಅವರು ವಿಶ್ವಗುರು ಬಸವಣ್ಣನವರ ಕುರಿತು ದತ್ತಿ ಉಪನ್ಯಾಸ ನೀಡಿ, ಕಾಯಕದ ಮಹತ್ವ ಸಾರಿದ ವಿಶ್ವಗುರು ಬಸವಣ್ಣ ಶರಣರು ವ್ಯಕ್ತಿಯನ್ನು ಅವರ ಕಾಯಕದಿಂದ ಗುರುತಿಸುತ್ತಿದ್ದರೇ ಹೊರತು ಅವರ ಜಾತಿಯಿಂದ ಅಲ್ಲ. ಬಸವಣ್ಣನವರ ದೃಷ್ಟಿಯಲ್ಲಿ ವ್ಯಕ್ತಿ ಹಾಗೂ ಸಮಾಜದ ಬದುಕು ಹಸನಾಗಲು ಕಾಯಕ ಮಾಡಲೇಬೇಕು. ಈ ಭೂಮಿಯಅಪರಿಮಿತಶಕ್ತಿಯಾಗಿಉದಯಿಸಿದವರೇ ಬಸವಣ್ಣ 12ನೇ ಶತಮಾನದ ಯುಗಪುರುಷರಾಗಿ, ಇಷ್ಟಲಿಂಗ ಪೂಜೆಯ ಮೂಲಕ ಶಿವಪಥದ ಅರಿವು ಮೂಡಿಸಿ, ಅಂತರಂಗ, ಬಹಿರಂಗದ ಸಾರ್ಥಕತೆಯ ಹರಿಕಾರರಾಗಿ ಕಾಯಕವೇ ಕೈಲಾಸ ಎಂಬ ಶ್ರಮ ಸಂಸ್ಕೃತಿಯ ಪ್ರಚುರಪಡಿಸಿ, ಮಾತಿನ ಮಹತ್ವ ತಿಳಿಸುತ್ತಾ, ಲಿಂಗ ಮೆಚ್ಚಿ ತಲೆದೂಗಬೇಕೆಂದು ಸೂಚಿಸಿ ಕಾಗೆ-ಕೋಳಿಗಳು ಬಂಧು-ಬಳಗವ ಉಣಲು ಆಹ್ವಾನಿಸಿದಂತೆ ಮನುಷ್ಯ ಸಹಕಾರ ಮನೋಭಾವ ಬೆಳೆಸಿಕೊಳ್ಳಬೇಕೆಂದು ಹೇಳುತ್ತಾ ಎಲ್ಲರೊಳಗೊಂದಾಗುವ ಸರ್ವ ಜನಾಂಗದ ವೇದಿಕೆಯಾಗಿ ಅನುಭವ ಮಂಟಪಕ್ಕೆ ಅರ್ಥ ನೀಡುವುದರ ಫಲವೇ ಅವರು ವಿಶ್ವಗುರು ಸಾಂಸ್ಕೃತಿಕ ನಾಯಕರಾಗಲು ಕಾರಣೀಭೂತವಾಯಿತು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಹಿಳಾ ಸೇವಾ ಸಮಾಜ ಪದವಿಪೂರ್ವ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ರಾಜೇಶ್ವರಿ ವೈ.ಎಂ. ತಾಯಂದಿರ ದಿನಾಚರಣೆ ಪ್ರಯುಕ್ತ ತಾಯಂದಿರ ಮಹತ್ವದ ಕುರಿತು ಮಾತನಾಡಿ, ತಾಯಂದಿರ ದಿನಾಚರಣೆ ಆರಂಭವಾದದ್ದನ್ನು ವಿವರಿಸಿ ಕುಟುಂಬದ ಸಾಮರಸ್ಯ ಹಾಗೂ ಏಳಿಗೆಯಲ್ಲಿ ತಾಯಿಯ ಪಾತ್ರದ ಮಹತ್ವವನ್ನು ತಿಳಿಸಿದರು.

ತಾಲ್ಲೂಕು ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಕಸಾಪ ಗೌರವ ಕಾರ್ಯದರ್ಶಿ ನಾಗರಾಜ ಸಿರಿಗೆರೆ, ನಿರ್ದೇಶಕ ಕುರ್ಕಿ ಸಿದ್ದೇಶ, ಪ್ರಜ್ಞಾ ವೇದಿಕೆ ಕಾರ್ಯದರ್ಶಿ ಶ್ರೀಮತಿ ಶಿವರತ್ನ, ಲೇಖಕಿ ಶ್ರೀಮತಿ ಶೈಲಜಾ, ಶ್ರೀಮತಿ ವಾಗ್ದೇವಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಆನಂದ ಧಾಮದ ಹಿರಿಯ ವನಿತೆಯರು, ಸ್ವಾಗತವನ್ನು ಹಿರಿಯ ಸಾಹಿತಿ ಜಿಲ್ಲಾ ಕಸಾಪ ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮ ನಾಗರಾಜ, ವಂದನಾರ್ಪಣೆಯನ್ನು ತಾಲ್ಲೂಕು ಕಸಾಪ ಗೌರವ ಕಾರ್ಯದರ್ಶಿಗಳಾದ ದಾಗಿನಕಟ್ಟೆ ಪರಮೇಶ್ವರಪ್ಪ, ನಿರೂಪಣೆಯನ್ನು ಪ್ರಧ್ಯಾಪಕಿ ಶ್ರೀಮತಿ ಸುಶೀಲ ಬಸವರಾಜ ಹಿರೇಮಠ ಮಾಡಿದರು.

# ಸಕ್ಕರೆ ಕಾರ್ಖಾನೆಯಿಂದಲೇ ಒಣಗಿರುವ ಕಬ್ಬಿನ ಬೆಳೆ ಸಮೀಕ್ಷೆ: ಎಸ್.ಎಸ್.ಗಣೇಶ್



ದಾವಣಗೆರೆ, ಮೇ 16- ಕುಕ್ಕುವಾಡ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ನೀರಿಲ್ಲದೆ ಬಿರು ಬಿಸಿಲಿನ ಝಳಕ್ಕೆ ಒಣಗಿ ನಾಶವಾಗಿರುವ ಕಬ್ಬಿನ ಬೆಳೆಯನ್ನು ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ದಾವಣಗೆರೆ ಸಕ್ಕರೆ ಕಂಪನಿ ಛೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಎಸ್.ಎಸ್. ಗಣೇಶ್ ಹೇಳಿದರು.

ಅವರು ಇಂದು ತಮ್ಮ ಕಚೇರಿಯಲ್ಲಿ ಭೇಟಿ ಮಾಡಿದ ರೈತ ಮುಖಂಡರಾದ ತೇಜಸ್ವಿ ಪಟೇಲ್, ಕೋಳೇನಹಳ್ಳಿ ಬಿ ಎಂ ಸತೀಶ್, ಹದಡಿ ಜಿ.ಸಿ.ನಿಂಗಪ್ಪ, ಮುದಹದಡಿ ದಿಳ್ಳೆಪ್ಪ, ಶಂಭುಲಿಂಗನಗೌಡ್ರು, ಕುಕ್ಕುವಾಡದ ಡಿ.ಬಿ.ಶಂಕರ್, ಕೆ.ಸಿ.ಶಿವಕುಮಾರ್ ಮುಂತಾದ ರೈತರ ನಿಯೋಗ ಸಲ್ಲಿಸಿದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಮಾತನಾಡಿದರು.

ರೈತರ ನಿಯೋಗವು ಒಣಗಿರುವ ಕಬ್ಬಿನ ಬೆಳೆ ಸಮೀಕ್ಷೆ ಸೇರಿದಂತೆ ಬಾಕಿಯಿರುವ ಕಬ್ಬು ಬಿಲ್ಲನ್ನು ರೈತರಿಗೆ ತಕ್ಷಣ ಬಿಡುಗಡೆ ಮಾಡಬೇಕು ಎಂದು ಮನವಿ ಸಲ್ಲಿಸಿತ್ತು. ಬಾಕಿಯಿರುವ ಕಬ್ಬಿನ ಬಿಲ್ ಇನ್ನೂ ಎರಡು, ಮೂರು ದಿನಗಳಲ್ಲಿ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದರು.

ರೈತರ ನಿಯೋಗದಲ್ಲಿ ಹೂವಿನಮಡು ಶಶಿಓಬಳೇಶ್, ರವಿಕುಮಾರ, ಕುಕ್ಕುವಾಡದ ಕೆ.ಜಿ.ರವಿಕುಮಾರ, ನಾಗರಸನಹಳ್ಳಿ ಚನ್ನಪ್ಪ, ಕೋಳೇನಹಳ್ಳಿ ಕೆ. ಶರಣಪ್ಪ, ಲಿಂಗಮೂರ್ತಯ್ಯ ಮುಂತಾದವರು ಉಪಸ್ಥಿತರಿದ್ದರು

# ಶಾಸಕ ರೇವಣ್ಣಗೆ ಮಧ್ಯಂತರ ಜಾಮೀನು

ಬೆಂಗಳೂರು, ಮೇ 16 – ಲೈಂಗಿಕ ಪೀಡನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಶಾಸಕ ಹೆಚ್.ಡಿ. ರೇವಣ್ಣಗೆ ಸ್ಥಳೀಯ ನ್ಯಾಯಾಲಯ ಮಧ್ಯಂತರ ಜಾಮೀನು ನೀಡಿದೆ. ಮನೆಕೆಲಸದ ಮಹಿಳೆ ರೇವಣ್ಣ ಹಾಗೂ ಅವರ ಪುತ್ರ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಹೊಳೆನರಸೀಪುರದಲ್ಲಿ ಏಪ್ರಿಲ್ 28ರಂದು ಲೈಂಗಿಕ ಪೀಡನೆಯ ದೂರು ದಾಖಲಿಸಿದ್ದರು. ಈ ಬಗ್ಗೆ ಎಸ್.ಐ.ಟಿ. ತನಿಖೆ ನಡೆಸುತ್ತಿದೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸಿದ್ದವೀರಪ್ಪ ಬಡಾವಣೆಯ 10, 11, ಮತ್ತು 12ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ನಗರದಲ್ಲಿ ನಾಳೆ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ಬ್ರಹ್ಮರಥೋತ್ಸವ



ದಾವಣಗೆರೆ, ಮೇ 16 - ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿಯ 25ನೇ ವರ್ಷದ ಬ್ರಹ್ಮರಥೋತ್ಸವವು ಇದೇ ದಿನಾಂಕ 18ರ ಶನಿವಾರ ಬೆಳಿಗ್ಗೆ 11.45ಕ್ಕೆ ನೆರವೇರಲಿದೆ.ಅಂದು ಮಧ್ಯಾಹ್ನ 12.30ಕ್ಕೆ ಸಕಲ ಭಕ್ತಾದಿಗಳಿಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

# ಮೇ ತಿಂಗಳ ಪಡಿತರ ಹಂಚಿಕೆ

ದಾವಣಗೆರೆ, ಮೇ 16- ಜಿಲ್ಲೆಯಲ್ಲಿನ ಪಡಿತರ ಚೀಟಿದಾರರಿಗೆ ಮೇ ತಿಂಗಳ ಪಡಿತರ ಧಾನ್ಯ ಹಂಚಿಕೆ ಮಾಡಲಾಗಿದೆ. ಅಂತ್ಯೋದಯ ಪಡಿತರ ಚೀಟಿದಾರರಿಗೆ ಪ್ರತಿ ಕಾರ್ಡ್‌ಗೆ 35 ಕೆ.ಜಿ ಅಕ್ಕಿ, ಆದ್ಯತಾ ಹಾಗೂ ಬಿ.ಪಿ.ಎಲ್ ಪಡಿತರ ಚೀಟಿದಾರರಿಗೆ 5 ಕೆ.ಜಿ ಅಕ್ಕಿ ಉಚಿತವಾಗಿ ವಿತರಿಸಲಾಗುತ್ತದೆ ಹಾಗೂ ಪ್ರತಿ ಕೆ.ಜಿ ಗೆ ರೂ.15 ರಂತೆ ಒಪ್ಪಿಗೆ ನೀಡಿದ ಎ.ಪಿ.ಎಲ್ ಏಕ ಸದಸ್ಯ ಪಡಿತರ ಚೀಟಿದಾರರಿಗೆ 5 ಕೆ.ಜಿ, ಎರಡು ಮತ್ತು ಹೆಚ್ಚಿನ ಸದಸ್ಯರನ್ನು ಹೊಂದಿರುವವರಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು.

ಸರ್ಕಾರದ ಗ್ಯಾರಂಟಿ ಯೋಜನೆಯಡಿ 5 ಕೆ.ಜಿ ಅಕ್ಕಿ ಬದಲಾಗಿ ಪಡಿತರ ಚೀಟಿದಾರರಿಗೆ ನೇರ ನಗದು ವರ್ಗಾವಣೆ ಮಾಡುತ್ತಿದ್ದು, ಯಾವುದೇ ರೀತಿಯ ತಾಂತ್ರಿಕ ಸಮಸ್ಯೆಗಳಿದ್ದಲ್ಲಿ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಪರಿಹರಿಸಿಕೊಳ್ಳಬಹುದೆಂದು ತಹಶೀಲ್ದಾರ್ ಡಾ.ಎಂ.ಬಿ.ಅಶ್ವತ್ಥ್ ತಿಳಿಸಿದ್ದಾರೆ.

# ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆ ನಗರದಲ್ಲಿ ಇಂದು ಕಾಂಗ್ರೆಸ್ ಸಭೆ

ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಇಂದು ಸಂಜೆ 4-30ಕ್ಕೆ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಪಕ್ಷದ ಪ್ರಮುಖರು ಮತ್ತು ಜಿಲ್ಲಾ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳ ಸಭೆಯನ್ನು ಕರೆಯಲಾಗಿದೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ. ಎಐಸಿಸಿ ಕಾರ್ಯದರ್ಶಿ ಮಯೂರ್ ಜಯಕುಮಾರ್, ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್, ಕರ್ನಾಟಕ ಅಧ್ಯಾಪಕರ ಸಂಘದ ಮಾಜಿ ಅಧ್ಯಕ್ಷ ಪ್ರೊ. ಸಿ. ಎಚ್. ಮುರುಗೇಂದ್ರಪ್ಪ ಭಾಗವಹಿಸಲಿದ್ದಾರೆ.

# ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆ

ದಾವಣಗೆರೆ, ಮೇ 16 - ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ 2024-25ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆಯನ್ನು ಇದೇ ದಿನಾಂಕ 19 ರಂದು ನಡೆಸಲಾಗುವುದು.

ವಿದ್ಯಾರ್ಥಿಗಳ ಪ್ರವೇಶ ಪತ್ರ ವನ್ನು ಜಿಲ್ಲಾ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ 44, ಜಿಲ್ಲಾಡಳಿತ ಭವನ, ಪಿ.ಬಿ ರಸ್ತೆ, ಕರೂರು ಕ್ರಾಸ್, ದಾವಣಗೆರೆ ಇಲ್ಲಿ ವಿತರಿಸಲಾಗುತ್ತಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ಶಾಲೆಯ 6ನೇ ತರಗತಿ ಪ್ರವೇಶಕ್ಕಾಗಿ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳು ಪ್ರವೇಶ ಪತ್ರ ವನ್ನು ಪಡೆದುಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08192-250022 ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ್ ಮಠದ್ ತಿಳಿಸಿದ್ದಾರೆ.

# ದ್ವಾರಕೀಶ್ ಅವರಿಗೆ 'ಸಿನಿಮಾ ಸಿರಿ' ಸಂಸ್ಥೆಯಿಂದ ಶ್ರದ್ಧಾಂಜಲಿ



ದಾವಣಗೆರೆ, ಮೇ. 16- ಇತ್ತೀಚೆಗೆ ವಿಧಿವಶರಾದ ನಟ, ನಿರ್ಮಾಪಕ ಹಾಗೂ ನಿರ್ದೇಶಕ ದಿ|| ದ್ವಾರಕೀಶ್ ರವರಿಗೆ ಸಿನಿಮಾ ಸಿರಿ ಸಂಸ್ಥೆಯ ಸರ್ವ ಸದಸ್ಯರ ಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ಅಂದನೂರು ಮುಪ್ಪಣ್ಣ, ಪ್ರಧಾನ ಕಾರ್ಯದರ್ಶಿ ಆರ್. ಟಿ. ಮೃತ್ಯುಂಜಯ, ಖಜಾಂಚಿ ನರಸಿಂಹ ಬಂಡಿವಾಡ್ ಹಿರಿಯ ಸದಸ್ಯರಾದ ಟಿ. ಎಮ್. ಪಂಚಾಕ್ಷರಿ, ಎಚ್. ವಿ. ಮಂಜುನಾಥ್ ಸ್ವಾಮಿ, ಸುರಭಿ ಶಿವಮೂರ್ತಿ, ಎಂ. ಜಿ. ಜಗದೀಶ್ ಇತರರು ಉಪಸ್ಥಿತರಿದ್ದರು

# ಜಾರ್ಖಂಡ್‌ನಲ್ಲಿ ಪತ್ತೆಯಾದ 32 ಕೋಟಿ ಸಚಿವ ಆಲಂಗೆ ಸೇರಿದ್ದು

ರಾಂಚಿ, ಮೇ 16 – ಇತ್ತೀಚೆಗೆ ಜಾರ್ಖಂ ಡ್‌ನ ಮನೆಕೆಲಸದ ವ್ಯಕ್ತಿಯ ಮನೆಯಲ್ಲಿ ವಶಪಡಿಸಿಕೊಳ್ಳಲಾದ 32.2 ಕೋಟಿ ರೂ. ನಗದು ಸಚಿವ ಆಲಂಗೀರ್ ಆಲಂಗೆ ಸೇರಿದ್ದು ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ.

ಸಚಿವರ ಕಾರ್ಯದರ್ಶಿಯ ಮನೆ ಕೆಲಸದ ವ್ಯಕ್ತಿಯ ಮನೆಯಲ್ಲಿ ಹಣ ವಶಪಡಿ ಸಿಕೊಳ್ಳಲಾಗಿತ್ತು. ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವರಾಗಿದ್ದ ಆಲಂ, ಪ್ರತಿ ಟೆಂಡರ್‌ಗಾಗಿ ಶೇ.1.5ರ ಕಮೀಷನ್ ಪಡೆಯುತ್ತಿದ್ದರು ಎಂದು ಆರೋಪಿಸಲಾಗಿದೆ. ಸಚಿವರನ್ನು ಬುಧವಾರ ಬಂಧಿಸಲಾಗಿತ್ತು. ನಂತರ ಅವರನ್ನು ಜಾರಿ ನಿರ್ದೇಶನಾಲಯದ ಕಸ್ಟಡಿಗೆ ವಹಿಸಲಾಗಿದೆ. ಸಚಿವರ ಆಪ್ತ ಕಾರ್ಯ ದರ್ಶಿ ಸಂಜೀವ್ ಕುಮಾರ್ ಲಾಲ್ ಬಳಿಯಿಂದ ಹಲವಾರು ಅಧಿಕೃತ ದಾಖಲೆ ಗಳನ್ನು ವಶಪಡಿಸಿಕೊಳ್ಳಲಾಗಿದೆ. ಸಚಿವರಿಗೆ ಸೇರಿದ ಹಣ ಹಾಗೂ ದಾಖಲೆಗಳನ್ನು ಮನೆಕೆಲಸದ ವ್ಯಕ್ತಿಯ ತಾಣದಲ್ಲಿ ಇರಿಸಲಾಗಿತ್ತು ಎಂದು ಆರೋಪಿಸಲಾಗಿದೆ.

# ಪ್ರತಿಷ್ಠಿತ ಖಾಸಗಿ ಶಾಲೆಯಲ್ಲಿ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 16- ಪರಿಶಿಷ್ಟ ಜಾತಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

5ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿರಬೇಕು. ವಿದ್ಯಾರ್ಥಿ ಕುಟುಂಬದ ವಾರ್ಷಿಕ ವರಮಾನ ರೂ. 2 ಲಕ್ಷದೊಳಗಿರಬೇಕು. ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಪೋಟೋ ಹಾಗೂ ಅಂಕಪಟ್ಟಿ, ಗ್ರಾಮೀಣ ಪ್ರಮಾಣ ಪತ್ರಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ, ರೂಂ.ನಂ 37. ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿಗೆ ಖುದ್ದು ಹಾಜರಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 21 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಅಥವಾ ಆಯಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರ ಕಚೇರಿ ಸಂಪರ್ಕಿಸಲು ಜಂಟಿ ನಿರ್ದೇಶಕ ಕೆ. ನಾಗರಾಜ ತಿಳಿಸಿದ್ದಾರೆ.

# ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ

ದಾವಣಗೆರೆ, ಮೇ 16 - ರಾಜ್ಯದ ಸರ್ಕಾರಿ ಅನುದಾ ನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣ ರಾಗಿ ಕನಿಷ್ಠ ಶೇ.35 ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸ ಲಾಗಿದೆ. ಅರ್ಜಿಯನ್ನು www.dte.kar.nic.in ಅಥವಾ www.kea.kar.nic.in ವೆಬ್ ಸೈಟ್ ಮೂಲಕ ಅರ್ಜಿ ಪಡೆದು ಇದೇ ದಿನಾಂಕ 21ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಡಿ.ಆರ್.ಆರ್ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ದಾವಣಗೆರೆ ಇವರನ್ನು ಸಂಪರ್ಕಿಸಿ.

# ಪ್ರಬಂಧ ಸ್ಪರ್ಧೆ

ದಾವಣಗೆರೆ, ಮೇ 16 - ಇಲ್ಲಿನ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ರಾಜ್ಯ ಮಟ್ಟದ ಉಚಿತ ಪ್ರಬಂಧ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಪ್ರಬಂಧ ಸ್ಪರ್ಧೆಯ ವಿಷಯ 'ಧರ್ಮಪತ್ನಿ' ಸಾರ್ವಜನಿಕವಾಗಿ ಯಾರಾದರೂ ಭಾಗವಹಿಸಬಹುದು. ವೈವಾಹಿಕ ಜೀವನದ ಬದುಕಿನ ಏಳು, ಬೀಳು, ಸುಖ, ದುಃಖ, ಸಂತೋಷದ ವಿಚಾರವಾಗಿ 3 ಪುಟಗಳು ಮೀರದಂತೆ ಮೇ 31ರ ಒಳಗಾಗಿ ಕಳಿಸಬೇಕು. ವಿವರಕ್ಕೆ ಸಂಪರ್ಕಿಸುವ ಮೊಬೈಲ್ 9538732777.

# ಚೆಸ್ ಜಿಲ್ಲಾ ಮಟ್ಟದಿಂದ ರಾಜ್ಯಮಟ್ಟಕ್ಕೆ ಆಯ್ಕೆ



ದಾವಣಗೆರೆ, ಮೇ 16- ನ್ಯೂ ದಾವಣಗೆರೆ ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ಡಿಸ್ಟ್ರಿಕ್ಟ್ ಚೆಸ್ ಚಾಂಪಿಯನ್‌ಶಿಪ್ ಪಂದ್ಯಾವಳಿಯನ್ನು ನಗರದ ರೋಟರಿ ಬಾಲ ಭವನದಲ್ಲಿ ಏರ್ಪಡಿಸಲಾಗಿತ್ತು.

ಈ ಪಂದ್ಯಾವಳಿಯಲ್ಲಿ ಒಟ್ಟು ಏಳು ವಿಭಾಗಗಳಲ್ಲಿ ಪಂದ್ಯಾವಳಿ ನಡೆಸಿ ಪ್ರತಿ ವಿಭಾಗದಲ್ಲಿ ಇಬ್ಬರು ಬಾಲಕರು, ಬಾಲಕಿಯರನ್ನು ರಾಜ್ಯಮಟ್ಟಕ್ಕೆ ಆಯ್ಕೆ ಮಾಡಲಾಯಿತು.

7 ವರ್ಷದ ಒಳಗಿನ ಬಾಲಕಿಯರ ವಿಭಾಗದಲ್ಲಿ ಎಂ.ಎಂ. ಜನನಿ ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ರುಥ್ವಿ ಸಿರಿ ಹಾಗೂ 9 ವರ್ಷದ ಬಾಲಕಿಯರ ವಿಭಾಗದಲ್ಲಿ ಸಾನ್ವಿಕ ಹಾಗೂ ಪೂರ್ವಿಕ, ಬಾಲಕರ ವಿಭಾಗದಲ್ಲಿ ಜಿ. ಎಸ್. ಆಕಾಶ್, ಮೊಹಮ್ಮದ್ ಆರ್ಯನ್, 11 ವರ್ಷದ ಬಾಲಕರ ವಿಭಾಗದಲ್ಲಿ ಅಮಿತ್, ಚಂದ್ರ, ಎಂ.ಎಸ್. ಅದ್ವೈತ್, ಬಾಲಕಿಯರ ವಿಭಾಗದಲ್ಲಿ ಹರಿಹರದ ಎಸ್.ಎಂ. ಶ್ರಾವ್ಯ 13 ವರ್ಷದ ಬಾಲಕಿಯರ ವಿಭಾಗದಲ್ಲಿ ಸೌಜನ್ಯ ಯುವರಾಜ್, ಬಾಲಕರ ವಿಭಾಗದಲ್ಲಿ ಇಶಾನ್ ಬಂಗೇರ, ಹೇಮಾದ್ರಿ ಮೂರ್ತಿ 15 ವರ್ಷದ ಬಾಲಕರ ವಿಭಾಗದಲ್ಲಿ ಎಂ.ಎಸ್. ದಿಗಂತ್, ಜಿ.ಎಸ್. ನಿಶ್ಚಲ್ 17 ವರ್ಷದ ಬಾಲಕರ ವಿಭಾಗದಲ್ಲಿ ಹರಿಹರದ ಎಂ.ಎಸ್. ಸ್ವಯಂ, ಬಿ. ಯುವರಾಜ್ ಬಾಲಕಿಯರ ವಿಭಾಗದಲ್ಲಿ ದಾವಣಗೆರೆಯ ಸಿ.ಎನ್. ವೇದಶ್ರೀ 19 ವರ್ಷದ ಬಾಲಕರ ವಿಭಾಗದಲ್ಲಿ ಎ. ಅರ್ಫತ್, ವೈ.ಎಂ. ತರುಣ್ ಆಯ್ಕೆಯಾದರು.

ಆಯ್ಕೆಯಾದ ಮಕ್ಕಳಿಗೆ ನಗರದ ವಕೀಲ ಎ.ಎಂ. ಹೆಗಡೆ ಹಾಗೂ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಭಟ್ ಪ್ರಶಸ್ತಿ ವಿತರಿಸಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಶ್ರೀಪಾದ್ ಹೆಗಡೆ, ಎಸ್.ಎಂ. ವಿದ್ಯಾ, ಪ್ರತೀಕ್ ಹೆಗಡೆ, ಯುವರಾಜ್ ಇನ್ನು ಮುಂತಾದವರು ಇದ್ದರು.

# ವಾಸ್ತವಿಕ ಸತ್ಯವು ಒಂದೇ, ಗೊಂದಲವು ಅಜ್ಞಾನದಿಂದಾಗಿ

**ಶ್ರೀ ಶಿವದೇವಾನಂದಗಿರಿ ಪುಣ್ಯಾರಾಧನೆಯಲ್ಲಿ ಸ್ವಾಮಿ ತ್ಯಾಗೀಶ್ವರಾನಂದಜೀ**

**ಅಹಂಕಾರ, ಮಮಕಾರಗಳು ದೂರಾದಲ್ಲಿ ಆನಂದ ಪ್ರಾಪ್ತಿ : ಹೆಚ್.ಬಿ.ಮಂಜುನಾಥ**



ದಾವಣಗೆರೆ, ಮೇ 16 - ವಾಸ್ತವಿಕ ಸತ್ಯ ಎಂಬುದು ಒಂದೇ. ಆದರೆ, ನಾವು ಅಜ್ಞಾನದಿಂದಾಗಿ ಗೊಂದಲದಲ್ಲಿ ಇರುತ್ತೇವೆ. ಮಹಾನ್ ವ್ಯಕ್ತಿಗಳ ಜೀವನಗಾಥೆಯ ಅಧ್ಯಯನದಿಂದ ಈ ಗೊಂದಲಕ್ಕೆ ಪರಿಹಾರ ಲಭ್ಯ ಎಂದು ರಾಮಕೃಷ್ಣ ಮಿಷನ್‌ನ ಕಾರ್ಯದರ್ಶಿ ಸ್ವಾಮಿ ಶ್ರೀ ತ್ಯಾಗೀಶ್ವರಾನಂದ ಜೀ ಮಹಾರಾಜ್ ಅಭಿಪ್ರಾಯಪಟ್ಟರು.

ಅವರು ಇಂದು ಶಾಸ್ತ್ರಿಹಳ್ಳಿಯ ಅಭಯಾಶ್ರಮದಲ್ಲಿ ಶ್ರೀ ಶಿವದೇವಾನಂದಗಿರಿ ಸ್ವಾಮಿಗಳ 24ನೇ ಪುಣ್ಯಾರಾಧನೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ, ಜೀವನದ ಸಾಧನೆಯು ಬದುಕಿನ ವಿಧಾನದಲ್ಲಿದೇ, ಚಂಚಲ ಚಿತ್ತವು ಏಕಾಗ್ರಗೊಂಡಾಗ ಬ್ರಹ್ಮ ಜ್ಞಾನದ ಪ್ರಾಪ್ತಿ ಮಾರ್ಗವು ಸುಲಭ ಎಂದರು.

ಕಾರ್ಯಕ್ರಮದ ಪ್ರಧಾನ ಉಪನ್ಯಾಸಕರಾಗಿ 'ಶ್ರೀರಾಮ ರಾಮ ನಾಮ ಮಹಿಮೆ'ಯ ಕುರಿತು ಮಾತನಾಡಿದ ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಅವರು 'ರಾಮ' ಎಂಬ ಎರಡಕ್ಷರದಲ್ಲಿ 'ರಾ' ಎಂದಾಗ ದೇಹದ ಪಾಪವೆಲ್ಲವೂ ವಾಯುವಿನ ರೂಪದಲ್ಲಿ ಬಾಯಿಂದ ಹೊರಹೋಗುತ್ತದೆ. 'ಮ' ಎಂದಾಗ ಪಾಪಗಳು ಒಳ ಹೋಗದಂತೆ ಬಾಯಿ ಮುಚ್ಚಿಕೊಳ್ಳುತ್ತದೆ. 'ರಾಮ' ಎಂಬ ಎರಡಕ್ಷರವು ವಿಷ್ಣುವಿನ ಸಾವಿರ ಹೆಸರುಗಳಿಗೆ ಸಮತೂಕವುಳ್ಳದ್ದೆಂದು ಪರಮೇಶ್ವರರೇ ಪಾರ್ವತಿಗೆ ಹೇಳಿರುವುದು ಮಹಾಭಾರತದ ಅನುಶಾಸನ ಪರ್ವದ ವಿಷ್ಣು ಸಹಸ್ರನಾಮ ಪಠಣದಲ್ಲಿ ಗೊತ್ತಾಗುತ್ತದೆ ಎಂದು ಅವರು ಹೇಳಿದರು.

'ಈ ದೇಹವೇ ನಾನು' ಎಂಬ 'ಅಹಂಕಾರ ಭಾವ' ಹಾಗೂ 'ನನ್ನ ಕುಟುಂಬ ಸದಸ್ಯರು ಮಾತ್ರ ನನ್ನವರು' ಎಂಬ 'ಮಮಕಾರ ಭಾವ' ದೂರ ಮಾಡಿಕೊಂಡು ವಿಶಾಲಭಾವ ಬೆಳೆಸಿಕೊಳ್ಳದೇ ಹೋದರೆ ಭಯ, ಶೋಕ, ಮೋಹಗಳನ್ನು ದೂರ ಮಾಡಿಕೊಳ್ಳಲು ಸಾಧ್ಯವಿಲ್ಲ, ಭಯಶೋಕಮೋಹಗಳು ದೂರವಾಗದೇ ಆನಂದ ಸ್ಥಿತಿ ಪ್ರಾಪ್ತವಾಗುವುದಿಲ್ಲ. ಆನಂದ ಸ್ಥಿತಿಯನ್ನು ಜಾಗೃತಾವಸ್ಥೆಯಲ್ಲೂ ಸಾಧ್ಯವಾಗಿಸಿಕೊಂಡವರೇ ನಿಜವಾದ ಮಹಾಪುರುಷರು, ಬ್ರಹ್ಮೀಭೂತ ಶ್ರೀ ಶಿವದೇವಾನಂದಗಿರಿ ಅವರು ಇದನ್ನು ಸಾಧಿಸಿಕೊಂಡವರು ಎಂದರು.

ಅಭಯಾಶ್ರಮ ಸೇವಾ ಟ್ರಸ್ಟ್‌ನ ಅಧ್ಯಕ್ಷ ರಾಜನಹಳ್ಳಿ ರಮೇಶ್ ಬಾಬು ಅಧ್ಯಕ್ಷೀಯ ನುಡಿಗಳನ್ನಾಡಿದರು. ಕರಿಬಸಪ್ಪನವರು ನಿರೂಪಿಸಿದ ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ತ್ರಿವೇಣಿ ಹಾಡಿದರೆ, ಸ್ವಾಗತವನ್ನು ಮಂಜಪ್ಪ ಮೇಷ್ಟ್ರು ಕೋರಿದರು. ವಂದನೆಗಳನ್ನು ನಿವೃತ್ತ ಇಂಜಿನಿಯರ್ ಗಣೇಶ್ ಡಾ.ಕರಿಯಪ್ಪ ಸಮರ್ಪಿಸಿದರು.

ಶ್ರೀ ಶಿವ ಶಿವದೇವಾನಂದಗಿರಿಯವರ ಪೂರ್ವಾಶ್ರಮದ ಮಾತೃಶ್ರೀರವರಾದ ಸರಸ್ವತಮ್ಮ ಮತ್ತು ಕುಟುಂಬ ವರ್ಗದವರು, ಸತ್ಯನಾರಾಯಣ ಮೂರ್ತಿ, ತುಂಬಿಗೆರೆ ಗೌಡ್ರು ಮುಂತಾದವರು ಹಾಗೂ ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸಿದ್ದರು.

# ಎಸ್.ಎಸ್.ಆಸ್ಪತ್ರೆಯಲ್ಲಿ ಸಹಜ ಹೆರಿಗೆ ಮತ್ತು ಶಸ್ತ್ರಚಿಕಿತ್ಸೆ

ದಾವಣಗೆರೆ, ಮೇ 16 - ಎಸ್.ಎಸ್. ಆಸ್ಪತ್ರೆಯಲ್ಲಿ ಸಹಜ ಹೆರಿಗೆ ಮತ್ತು ಶಸ್ತ್ರಚಿಕಿತ್ಸೆ ಹೆರಿಗೆಯನ್ನು ಬಿಪಿಎಲ್ ಕಾರ್ಡ್ ಇರುವವರಿಗೆ ಉಚಿತವಾಗಿ ಮಾಡಲಾಗುವುದು.

ಬಿಪಿಎಲ್ ನಲ್ಲಿ 4ಎ ಅಡಿಯಲ್ಲಿ ದಾಖಲಾದ ರೋಗಿಗಳನ್ನು ಎಬಿಎಆರ್‌ಕೆ ಎಂದು ಪರಿಗಣಿಸಲಾಗುವುದು. ಬಿಪಿಎಲ್ ಕಾರ್ಡ್ ಇಲ್ಲದವರಿಗೆ ಔಷಧ ಮತ್ತು ಸಲಕರಣೆ ಹೊರತುಪಡಿಸಿ ಸಹಜ ಹೆರಿಗೆ ಮತ್ತು ಶಸ್ತ್ರ ಚಿಕಿತ್ಸೆಗೆ ವಿನಾಯಿತಿ ನೀಡಲಾಗುವುದು. ಯಶಸ್ವಿನಿ ಯೋಜನೆಯಡಿಯಲ್ಲಿ ಸಹಜ ಹೆರಿಗೆ ಮತ್ತು ಶಸ್ತ್ರ ಚಿಕಿತ್ಸೆ ಹೆರಿಗೆಗಳನ್ನು ಉಚಿತ ಎಂದು ಪರಿಗಣಿಸಲಾಗುವುದು.

ಈ ಸೌಲಭ್ಯಗಳು ಸ್ಪೆಷಲ್ ವಾರ್ಡ್‌ನಲ್ಲಿ ದಾಖಲಾದ ರೋಗಿಗಳಿಗೆ ಅನ್ವಯವಾಗುವುದಿಲ್ಲ. ಕೆಲವೊಂದು ರಕ್ತ ಪರೀಕ್ಷೆ ಮತ್ತು ಸ್ಕ್ಯಾನಿಂಗ್ ಪರೀಕ್ಷೆಗಳು ಉಚಿತವಾಗಿ ಇರುತ್ತವೆ. ಈ ಎಲ್ಲಾ ಸೌಲಭ್ಯಗಳು ಬರುವ ಜುಲೈ 31ರವರೆಗೆ ಮಾತ್ರ ಲಭ್ಯವಿರುತ್ತವೆ. ವಿವರಕ್ಕೆ 944976322ಗೆ ಸಂಪರ್ಕಿಸಬಹುದು.

# ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಲೋಕೇಶ್ ತಾಳಿಕಟ್ಟೆ ನಾಮಪತ್ರ



ದಾವಣಗೆರೆ, ಮೇ 16 - ಆಗ್ನೇಯ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಲೋಕೇಶ್ ತಾಳಿಕಟ್ಟೆಯವರು ಬೆಂಗಳೂರಿನ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ರೂಪ್ಸ ಕರ್ನಾಟಕದ ಗೌರವ ಅಧ್ಯಕ್ಷ ಚಂದ್ರಕಾಂತ್ ಭಂಡಾರಿ, ಉಪಾಧ್ಯಕ್ಷ ಕೋಲಾರದ ಮುನಿಯಪ್ಪ, ದಾವಣಗೆರೆ ಡಿಎಎಂಎಸ್ ಅಧ್ಯಕ್ಷ ಟಿ. ಎಂ. ಉಮಾಪತಯ್ಯ, ಸಂಚಾಲಕ ಕೆ.ಎಸ್. ಪ್ರಭು ಕುಮಾರ್, ನಾಗರಾಜ್ ಸಂತೇಬೆನ್ನೂರು, ಎನ್.ಎಂ. ಲೋಕೇಶ್ ಮುಂತಾದವರು ಉಪಸ್ಥಿತರಿದ್ದರು.

## ಪುಷ್ಪ ಶಾಮನೂರು ಮಹಾಲಿಂಗಪ್ಪ ಸಿಬಿಎಸ್ಸಿ ಶಾಲೆಗೆ ಶೇ.100 ಫಲಿತಾಂಶ



ದಾವಣಗೆರೆ, ಮೇ 16 - ನಗರದ ಶ್ರೀಮತಿ ಪುಷ್ಪ ಶಾಮನೂರು ಮಹಾಲಿಂಗಪ್ಪ ಸಿಬಿಎಸ್‌ಇ ಶಾಲೆಯ 2023-24ನೇ ಸಾಲಿನ 10ನೇ ತರಗತಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಲಭಿಸಿದೆ.

ಶಾಲೆಯ ಒಟ್ಟು 113 ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದು, ಅದರಲ್ಲಿ 20 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 65 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 16 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಪ್ರಾಂಜಲಿ ಸಿಂಗ್ 500 ಕ್ಕೆ 480 ಅಂಕ ಗಳಿಸಿ ಶಾಲೆಗೆ ಮೊದಲ ಸ್ಥಾನ (96%) ಗಳಿಸಿದ್ದಾರೆ. ಈ ವಿದ್ಯಾರ್ಥಿನಿಯು ವಿಜ್ಞಾನ ವಿಷಯದಲ್ಲಿ 100 ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ. ಅನನ್ಯ ವಿ.ಎಸ್. 474, ಕಿಶನ್ ಪಿ.ಕೆ. 466 ಅಂಕಗಳನ್ನು ಗಳಿಸಿ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ. ಎಲ್ಲಾ ವಿದ್ಯಾರ್ಥಿಗಳನ್ನು ಶಾಲೆಯ ಪ್ರಾಂಶುಪಾಲರು, ಬೋಧಕ ವರ್ಗದವರು ಮತ್ತು ಸಂಸ್ಥೆಯ ಆಡಳಿತ ಮಂಡಳಿ ಅಭಿನಂದಿಸಿದ್ದಾರೆ.

## ಜನ್ಮದಿನದ ಸಾರ್ವಜನಿಕ ಆಚರಣೆ ಬೇಡ ಎಂದ ಮಾಜಿ ಪ್ರಧಾನಿ ದೇವೇಗೌಡ



ಬೆಂಗಳೂರು, ಮೇ 16 - ತಮ್ಮ ಜನ್ಮದಿನವನ್ನು ಸಾರ್ವಜನಿಕವಾಗಿ ಆಚರಣೆ ಮಾಡದಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಮೇ 18ರಂದು ದೇವೇಗೌಡರು 91 ವರ್ಷ ಪೂರೈಸಿ 92ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಕಾರಣಾಂತರಗಳಿಂದ ನಾನು ಜನ್ಮ ದಿನ ಆಚರಣೆ ಮಾಡಿಕೊಳ್ಳುತ್ತಿಲ್ಲ, ಹೀಗಾಗಿ ತಾವೆಲ್ಲರೂ ಇದ್ದಲ್ಲಿಯೇ ಹಾರೈಸುವಂತೆ ಮನವಿ ಮಾಡಿದ್ದಾರೆ.

ಪ್ರಸಕ್ತ ನಡೆಯುತ್ತಿರುವ ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ (ಎನ್‌ಡಿಎ) ಅಭ್ಯರ್ಥಿಗಳ ಗೆಲುವಿಗೆ ಎಲ್ಲರೂ ಪ್ರಾಮಾಣಿಕವಾಗಿ ಶ್ರಮಿಸಬೇಕು ಹಾಗೂ ಪಕ್ಷ ಸಂಘಟನೆಗೆ ಪ್ರತಿಯೊಬ್ಬರೂ ಬದ್ಧತೆಯಿಂದ ಕರ್ತವ್ಯ ನಿರ್ವಹಿಸಬೇಕೆಂದು ಅವರು ಕೋರಿದ್ದಾರೆ.

## ಪೆನ್‌ಡ್ರೈವ್ ಪ್ರಕರಣ : ಹಾಸನದ 18 ಕಡೆಗಳಲ್ಲಿ ಎಸ್.ಐ.ಟಿ. ದಾಳಿ

ಹಾಸನ, ಮೇ 16 - ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ, ಎಸ್.ಐ.ಟಿ. ಹಾಸನದ 18 ಕಡೆಗಳಲ್ಲಿ ದಾಳಿ ನಡೆಸಿದೆ. ವಿಡಿಯೋಗಳ ಹಂಚಿಕೆಗೆ ಸಂಬಂಧಿಸಿದಂತೆ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಆಪ್ತರ ಮನೆಗಳಲ್ಲಿ ದಾಳಿ ನಡೆದಿದ್ದು, ಒಟ್ಟು 7 ಪೆನ್ ಡ್ರೈವ್, 6 ಹಾರ್ಡ್ ಡಿಸ್ಕ್, 4 ಲ್ಯಾಪ್‌ಟಾಪ್, 3 ಡೆಸ್ಕ್ ಟಾಪ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

## ಓಬಜ್ಜಿಹಳ್ಳಿ ಬಳಿ ಯುವಕನ ಕೊಲೆ

ದಾವಣಗೆರೆ, ಮೇ 16- ತಾಲ್ಲೂಕಿನ ಓಬಜ್ಜಿಹಳ್ಳಿ ಹೊರವಲಯದಲ್ಲಿ ದುಷ್ಕರ್ಮಿಗಳು ಯುವಕನೋರ್ವನನ್ನು ಚಾಕುವಿನಿಂದ ಚುಚ್ಚಿ ಭೀಕರವಾಗಿ ಹತ್ಯೆ ಮಾಡಲಾಗಿದೆ.

ನಗರದ ಬೂದಾಳ್ ನಿವಾಸಿ ಸಂದೀಪ್ (24) ಕೊಲೆಯಾದ ಯುವಕ ಎಂದು ಗುರುತಿಸಲಾಗಿದೆ. ಕೊಲೆಯಾದ ಸಂದೀಪ್ ಈ ಹಿಂದೆ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎನ್ನಲಾಗುತ್ತಿದೆ. ಬುಧವಾರ ರಾತ್ರಿ ಪಾರ್ಟಿ ಮಾಡಲು ಹೋಗಿದ್ದರು ಎನ್ನಲಾಗುತ್ತಿದೆ. ಕೊಲೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಘಟನಾ ಸ್ಥಳಕ್ಕೆ ಎಸ್‌ಪಿ ಉಮಾ ಪ್ರಶಾಂತ್, ಗ್ರಾಮಾಂತರ ಠಾಣೆ ಸಿಪಿಐ ಕಿರಣ್ ಕುಮಾರ್ ಹಾಗು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆರೋಪಿಗಳ ಬಂಧನಕ್ಕೆ ಶೋಧ ನಡೆಯುತ್ತಿದೆ.

## ಮಾದಾರ ಚೆನ್ನಯ್ಯ ಗುರು ಪೀಠಕ್ಕೆ ಬಾಲವಟುವಿನ ಸ್ವೀಕಾರ



ಚಿತ್ರದುರ್ಗ, ಮೇ 16 - ಇಲ್ಲಿನ ಮಾದಾರ ಚೆನ್ನಯ್ಯ ಗುರು ಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಶ್ರೀಗಳು ಬಸವ ಜಯಂತಿಯಂದು ಬಾಲಕನೋರ್ವನನ್ನು ವಟುವಾಗಿ ಸ್ವೀಕರಿಸಿ, ಧಾರ್ಮಿಕ ವಿಧಿ ವಿಧಾನದಿಂದ ದೀಕ್ಷೆ ನೀಡಿ 'ಜಯ ಬಸವ' ಎಂದು ನಾಮಕರಣ ಮಾಡಿದ್ದಾರೆ.

ಎಸ್.ಜೆ.ಎಂ ವಿದ್ಯಾಪೀಠದ ಆಡಳಿತ ಮಂಡಳಿ ಅಧ್ಯಕ್ಷ ಶಿವಯೋಗಿ ಕಳಸದ್, ನಿರ್ದೇಶಕ ಡಾ. ಬಸವ ಕುಮಾರ ಸ್ವಾಮೀಜಿ, ಚಂದ್ರಶೇಖರ್, ವಿವಿಧ ಮಠದ ಶ್ರೀಗಳು ಮತ್ತು ಬಸವಾಭಿಮಾನಿಗಳಿದ್ದರು.


### ಅಖಿಲ ಕರ್ನಾಟಕ ದೈವಜ್ಞ ಬ್ರಾಹ್ಮಣ ಸಂಘ (ರಿ) ಧಾರವಾಡ.



(ನೊಂದಣಿ ಸಂಖ್ಯೆ : 354/94-95)
ಕಾರ್ಯಾಲಯ : ದೈವಜ್ಞ ಸಮುದಾಯ ಭವನ, 1ನೇ ಮಹಡಿ, ದೈವಜ್ಞ ಸಮಾಜ ಸೇವಾ ಸಂಘ (ರಿ), ಧಾರವಾಡ ಎನ್.ಟಿ.ಟಿ.ಎಫ್. ಹತ್ತಿರ, ಹುಬ್ಬಳ್ಳಿ- ಧಾರವಾಡ ರಸ್ತೆ, ಧಾರವಾಡ.
ಮೊ. : 9902182373, 9480480079, 9481885331



### ಸರ್ವ ಸಾಧಾರಣ ಸಭೆಯ (ಜಿಬಿ) ನೋಟಿಸು

ದಿನಾಂಕ : 26-04-2024

ಸರ್ಕಾರದ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ನೋಂದಣಾಧಿಕಾರಿಗಳು, ದಾವಣಗೆರೆ ಇವರ ನಿರ್ದೇಶನದಂತೆ **ದಿನಾಂಕ 19-05-2024ರ ಭಾನುವಾರ ಬೆಳಿಗ್ಗೆ 10:30 ಗಂಟೆಗೆ ಧಾರವಾಡದ ದೈವಜ್ಞ ಸಮುದಾಯ ಭವನದಲ್ಲಿ** ಅ.ಕ.ದೈ.ಬ್ರಾ.ಸ.(ರಿ) ದ ಸರ್ವ ಸಾಧಾರಣ ಸಭೆಯನ್ನು (ಜಿಬಿ) ಕರೆಯಲಾಗಿದೆ.

**ವಿಷಯ ಸೂಚಿ :**

1. ಪ್ರಾರ್ಥನೆ
2. ಸ್ವಾಗತ ಭಾಷಣ
3. ದಿನಾಂಕ : 26-03-2024 ರಂದು ಕರ್ನಾಟಕ ಸರ್ಕಾರದ (ಸಹಕಾರ ಇಲಾಖೆ) ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ನೋಂದಣಿ ಅಧಿಕಾರಿಗಳು ದಾವಣಗೆರೆ ಇವರಿಂದ ಬಂದ ಪತ್ರದ ಕುರಿತು.
4. ಅ.ಕ.ದೈ. ಬ್ರಾ. ಸಂಘ (ರಿ) ದ ನೋಂದಣಿ ನವೀಕರಣ ಕುರಿತು.
5. ದೈವಜ್ಞ ಬಾಂಧವರ ಅಭಿಪ್ರಾಯಗಳು
6. ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು
7. ಸಭಾಧ್ಯಕ್ಷರ ಭಾಷಣ
8. ವಂದನಾರ್ಪಣೆ.

ಸಭೆಯಲ್ಲಿ ಸಂಘದ ಆಜೀವ ಸದಸ್ಯತ್ವ ಹೊಂದಿದ ಸದಸ್ಯರು ಹಾಗೂ ನೂತನ ಸದಸ್ಯತ್ವಕ್ಕೆ ಹಣ ತುಂಬಿದವರು ಕೂಡ ಹಾಜರಿರಲು ಕೋರಲಾಗಿದೆ.
ವಿಶೇಷ ಸೂಚನೆ : ಸಮಾಜದ ಗಣ್ಯರು, ಹಿರಿಯರು ಹಾಗೂ ದೈವಜ್ಞ ಬಾಂಧವರ ಸಭೆಗೆ ಬರಲು ಕೋರಲಾಗಿದೆ.
ಭೋಜನ ವಿರಾಮ : ಮಧ್ಯಾಹ್ನ 2 ರಿಂದ 3 ಗಂಟೆವರೆಗೆ (ಭೋಜನ ವ್ಯವಸ್ಥೆಯನ್ನು ಮಾಡಲಾಗಿದೆ.)

ಸಹಿ/- ಶ್ರೀ ರವಿ ಎಸ್. ಗಾಂವಕರ
ರಾಜ್ಯಾಧ್ಯಕ್ಷರು, ಅ.ಕ.ದೈ.ಬ್ರಾ.ಸಂಘ (ರಿ)

ವಿ.ಸೂ. : ಸಂಘದ ಸರ್ವ ಸದಸ್ಯರುಗಳು ಇದನ್ನೇ ಆಹ್ವಾನ ಪತ್ರಿಕೆಯೆಂದು ಭಾವಿಸಿ, ಸಭೆಗೆ ಆಗಮಿಸಬೇಕಾಗಿ ವಿನಂತಿ.

ಪ್ರಶಾಂತ್ ವಿ. ವೇರ್ಣೇಕರ್, ಅಧ್ಯಕ್ಷರು
ಮತ್ತು ಕಾರ್ಯಕಾರಿ ಮಂಡಳಿ
ದೈವಜ್ಞ ಸಮಾಜ ಸಂಘ (ರಿ.), ದಾವಣಗೆರೆ.


## ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಇಂದು ಕನ್ನಿಕೆಯರ ಪೂಜೆ



ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ದೇವಿಗೆ ಇಂದು ಸಂಜೆ 4 ರಿಂದ ಕನ್ನಿಕೆಯರ ಪೂಜೆ ನೆರವೇರಲಿದೆ.

ಸಂಜೆ 6.30ರಿಂದ ವಾಸವಿ ಮಹಿಳಾ, ವಾಸವಿ ಯುವತಿಯರ ಸಂಘದಿಂದ ವಾಸವಿ ಜಯಂತ್ಯೋತ್ಸವ ಹಾಡುಗಳೊಂದಿಗೆ ಶ್ರೀ ದೇವಿಗೆ ಪೂಜೆ ಮಾಡಲಾಗುವುದು. ಇದೇ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಾಡಾಗಿದೆ ಎಂದು ಸಂಘದ ಅಧ್ಯಕ್ಷ ಆರ್. ಎಲ್. ಪ್ರಭಾಕರ್, ಕಾರ್ಯದರ್ಶಿ ಜೆ. ರವೀಂದ್ರ ಗುಪ್ತ ತಿಳಿಸಿದ್ದಾರೆ.







| Subjects | Highest Score | % |
|---|---|---|
| KANNADA | 124 | 100 |
| ENGLISH | 99 | 100 |
| HINDI | 100 | 100 |
| MATHEMATICS | 86 | 100 |
| SCIENCE | 87 | 100 |
| SOCIAL SCIENCE | 98 | 100 |

| Grade | STUDENT |
|---|---|
| A+ | 02 |
| A | 10 |
| B+ | 06 |
| B | 06 |
| C+ | 18 |

| RESULTS | BOYS | GIRLS | TOTAL |
|---|---|---|---|
| Distinction | 01 | 08 | 09 |
| 1st Class | 6 | 09 | 15 |
| 2nd Class | 12 | 1 | 18 |

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas